ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ಜನಪದ ವಿಚಾರ

• ನೆರೆಹೊರೆಯ ನೆನಪು

• ಕೈಗಾರಿಕಾ ನೀತಿಯ ಬಗ್ಗೆ

• 'ಆತ್ಮೀಯ ಶತ್ರು' ವನ್ನು ಓದಿ

ಗಾಂಧೀ ಜನರ ಕರ್ತವ್ಯ ವಿವಾದದ ಸುಳಿಯಲ್ಲಿ

ಸಂಪುಟ : ೧೧ ಸೆಪ್ಟೆಂಬರ್-ಅಕ್ಟೋಬರ್ ೧೯೬೦ ಸಂಚಿಕೆ : ೩-೪

ಈ ಸಂಚಿಕೆಯಲ್ಲಿ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ಜನಪದ ವಿಚಾರ

ಸಂಪುಟ: ೧೧ ಮೇಲುಕೋಟೆ. ಅಕ್ಟೋಬರ್ ೧೫, ೧೯೯೦ ಸಂಚಿಕೆ ೩

ನಿಮ್ಮೊಂದಿಗೆ ....

ಕಳೆದ ಸಲವತ್ತು ವರ್ಷಗಳಲ್ಲಿ ನಮ್ಮ ಕನಸುಗಳು ನಿರ್ದಾಕ್ಷಿಣ್ಯವಾಗಿ ಪುಡಿಯಾಗಿದೆ. ಮುರುಕು ಜಂತಿ, ಕಂಬಗಳ ಮನೆಯಲ್ಲಿ ಒಳಗಿರಲಾರದೇ, ಹೊಸತು ಕಟ್ಟುವ ದಾರಿ ಕಾಣದೇ ವ್ಯಗ್ರರಾಗುತ್ತಿದ್ದೇವೆ.

ಈ ಹತಾಶೆ, ಹುಚ್ಚು ಇಂದು ಬಹಿರಂಗಗೊಂಡಂತಿದೆ. ಆತ್ಮಾಹುತಿ, ಸಂಶಯ, ದ್ವೇಷ, ಮೇಲಾಟಗಳ ವಿಹ್ವಲ ಸ್ಥಿತಿಯಲ್ಲಿ ಯಾರಿಗೂ ಏನೂ ಕಾಣುತ್ತಿಲ್ಲ, ಕೇಳಿಸುತ್ತಿಲ್ಲ. ಯೇಟ್ಸ್ ಹೇಳಿದ, "The best lack all conviction whereas the worst are full of passionate intensity" ಪ್ರವಾದಿಯ ಮಾತುಗಳಂತೆ ನಿಜವಾಗುತ್ತಿದೆ.

ನಮ್ಮನ್ನು ಸದಾ ಕಾಡುವ ಗಾಂಧಿ ನಮ್ಮೊಳಗೇ ಇಳಿದಿಲ್ಲ. ಗಾಂಧಿ ಬಯಸುವ ಪ್ರಾಮಾಣಿಕತೆ, ಪ್ರೇಮ, ಸರಳತೆ, ಪ್ರಯೋಗಕ್ಕೊಡ್ಡುವ ಛಲ – ಇವೆಲ್ಲವನ್ನು ಕಳಕೊಂಡು ಲಡ್ಡಾಗಿರುವ ನಾವು ಗಾಂಧಿಯನ್ನು ಆವಾಹಿಸಿಕೊಳ್ಳುವುದಾದರೂ ಹೇಗೆ ?

* * *

ಗಾಂಧಿಯ ಬದುಕಿನ ಪ್ರಯೋಗ ಶೀಲತೆ ಮುಖ್ಯವೆನಿಸದೇ ಗಾಂಧಿಯ ತತ್ವಗಳಿಗೆ ಪ್ರಾಯೋಗಿಕತೆಯ ನೆಲೆ ಇರಲಾರದು.

ಈ ನಿಟ್ಟಿನಲ್ಲಿ ಒಂದು ಪುಟ್ಟ ಹೆಜ್ಜೆ ಇಡುತ್ತಿದ್ದೇವೆ. ಜನಪದ ಸೇವಾ ಟ್ರಸ್ಟಿನ ಮೂವತ್ತೆಕರೆ ಕೃಷಿ ಭೂಮಿಯಲ್ಲಿ ಪರ್ಯಾಯ ಚಿಂತನೆ, ಪ್ರಯೋಗ, ಕಾರ್ಯಕ್ರಮಗಳ ಬಗ್ಗೆ ಹೆಜ್ಜೆಯಿಡಲು ಒಂದು ಕೇಂದ್ರವನ್ನು ಆರಂಭಿಸಿದ್ದೇವೆ.

'ಹೊಸ ಜೀವನ ದಾರಿ' ಎಂಬ ಹೆಸರಿನ ಈ ಕೇಂದ್ರದಲ್ಲಿ ಈಗಾಗಲೇ ಖಾದಿ ನೇಯ್ಗೆ, ಸಹಜ, ಜೈವಿಕ ಕೃಷಿ ಪ್ರಯೋಗಗಳು ನಡೆಯುತ್ತಿವೆ. ಈ ಕೇಂದ್ರವನ್ನು

ಇನ್ನಷ್ಟು ವ್ಯವಸ್ಥಿತವಾಗಿ – ಸಾಮಾಜಿಕ ಪುನರ್ರಚನೆಯ ಚಿಂತನೆ, ಪ್ರಯೋಗಗಳ ಬಗ್ಗೆ ಚರ್ಚೆ, ತರಬೇತಿಗಳನ್ನು - ನಡೆಸುವ ದೃಷ್ಟಿಯಿಂದ ಇದಕ್ಕೆ ಅನೌಪಚಾರಿಕ ವಿದ್ಯಾಲಯದ ಸ್ವರೂಪ ನೀಡಲಾಗುತ್ತಿದೆ.

ಮುಖ್ಯವಾಗಿ ಸಾಮಾಜಿಕ ಪುನರ್ರಚನೆಯ ಕಾಳಜಿಯಿದ್ದು, ಗ್ರಾಮಾಂತರ ಪ್ರದೇಶಗಳಲ್ಲಿ ಕೆಲಸ ಮಾಡುವ ಯುವಕರು ಸ್ವಲ್ಪ ದಿನ ಇಲ್ಲಿದ್ದು ತೆರಳಬಹುದು.

ಕೃಷಿ, ಪರಿಸರ, ಗ್ರಾಮೀಣ ಆರ್ಥಿಕತೆ. ಸದ್ಯದ ಸಾಮಾಜಿಕ ಸ್ಥಿತಿಗತಿಗಳ ಬಗ್ಗೆ ಚರ್ಚಿಸಿ, ಓದಿ, ಚಿಂತಿಸಿ ಸ್ಪಷ್ಟತೆ ಪಡಕೊಳ್ಳುವ ಬಗ್ಗೆ ಒತ್ತು ನೀಡಬೇಕೆಂದಿದೆ.

ಇದರ ರೂಪು ರೇಷೆಗಳು ಇನ್ನು ಸ್ಪಷ್ಟಗೊಳ್ಳಬೇಕಾಗಿದೆ. ಈ ಬಗ್ಗೆ ವಿವರವಾದ ಯೋಜನೆಯೊಂದನ್ನು ಸಿದ್ಧಪಡಿಸಲಾಗುತ್ತಿದೆ. ಈ ಕೇಂದ್ರವನ್ನು ಕಟ್ಟಿ, ಅರ್ಥ ಪೂರ್ಣವಾಗಿಸಲು ನಿಮ್ಮ ಸಲಹೆ, ಸಹಕಾರ ಬೇಕು.

ನಿಮ್ಮ ಭಾಗವಹಿಸುವಿಕೆಯ ಬಗ್ಗೆ ದಯವಿಟ್ಟು ಬರೆಯಿರಿ.

★ ★ ★

ಅನಿವಾರ್ಯ ಕಾರಣಗಳಿಂದ ಸೆಪ್ಟೆಂಬರ್ ತಿಂಗಳ ಸಂಚಿಕೆ ಪ್ರಕಟಿಸಲಾಗಲಿಲ್ಲ. ಅದಕ್ಕಾಗಿ ಕ್ಷಮೆ ಕೋರುತ್ತೇವೆ. ಮುಂದೆ ಹೀಗಾಗದಂತೆ ಎಚ್ಚರಿಕೆ ವಹಿಸುತ್ತೇವೆ.

– ಕೆ. ಪಿ ಸುರೇಶ್
(ಸಂಪಾದಕೀಯ ಮಂಡಳಿಯ ಪರವಾಗಿ)

★ ✿ ★

ನಮ್ಮ ಈ ತಲೆಮಾರಿನಲ್ಲಿ ನಾವು ನೀಚರ ದುಷ್ಕೃತ್ಯಗಳಿಗೆ ತಲೆ ತಗ್ಗಿಸುವುದಕ್ಕಿಂತ ಹೆಚ್ಚು, ಸಜ್ಜನರ ನಿಷ್ಕ್ರಿಯ ಮೌನಕ್ಕೆ ಲಜ್ಜೆ ಪಡಬೇಕಾಗಿದೆ.

–ಡಾ॥ ಮಾರ್ಟಿನ್ ಲೂಥರ್ ಕಿಂಗ್

ನೆರೆಹೊರೆಯ ನೆನಪು

—ಪಿ. ಎಲ್. ಕುಮಾರಸ್ವಾಮಿ

ಪಿ. ಎಲ್. ಕುಮಾರಸ್ವಾಮಿ ಜನಪದ ಸೇವಾ ಟ್ರಸ್ಟ್‌ನಲ್ಲೇ ಬೆಳೆದು, ಕಾರ್ಯಕರ್ತರಾಗಿ, ಟ್ರಸ್ಟ್‌ನ ಟ್ರಸ್ಟಿಯಾಗಿ 'ಹೊಸ ಜೀವನ ದಾರಿ' ಕೇಂದ್ರವನ್ನು ಬೆಳೆಸಿದವರು. ಅವರ ಫ್ರಾನ್ಸ್ ಪ್ರವಾಸದ ಅನುಭವ ಕಥನದ ಒಂದು ಭಾಗ ಇಲ್ಲಿ ಪ್ರಕಟಿಸಿದೆ ಸಂ.

……ಅಂತೂ ಸ್ವಲ್ಪ ಭಾರದ ಮನಸ್ಸಿನಿಂದ, ತಾಯ್ನಾಡನ್ನು ನೋಡುವೆನೆಂಬ ಸಂತೋಷದಿಂದ ವಿಮಾನವನ್ನು ಏರಿಯಾಯಿತು. ನನ್ನ ಬಲಗಡೆ ಪಕ್ಕದಲ್ಲಿ ಒಬ್ಬ ಪಾಂಡಿಚೇರಿಯವನು ಇದ್ದ ವಯಸ್ಸು ಸುಮಾರು ೬೦ ಇರಬಹುದು. ಆತನ ಪಕ್ಕದಲ್ಲಿ ಪಾಕಿಸ್ತಾನಿ ವೃದ್ಧ ದಂಪತಿಗಳು ಇಬ್ಬರು ಕರಾಚಿಯಲ್ಲಿ ಇಳಿಯುವವರು. ನಾನು ಅಂಗವಿಕಲನಾಗಿ ವಿಮಾನದಲ್ಲಿ ಪ್ರಯಾಣಿಸುತ್ತಿರುವುದು ಅವರಿಗೆ ಸ್ವಲ್ಪ ಕುತೂಹಲ ಹುಟ್ಟಿಸಿತ್ತು. ನನ್ನ ವಿಷಯವನ್ನು ನನ್ನ ಪ್ರವಾಸವನ್ನು ಸಂಕ್ಷಿಪ್ತವಾಗಿ ತಿಳಿಸಿದೆ. ಅವರಿಗೆ ಬಹಳ ಸಂತೋಷವಾಯಿತು. ಅವರು ಪಾಕಿಸ್ತಾನದವರೆಂದು ಗೊತ್ತಾದ ಕೂಡಲೇ ನಾನು ನಗುತ್ತಾ, "ನಮ್ಮ ದೇಶಗಳೂ ಅಕ್ಕ ಪಕ್ಕ, ನಾವು ಕುಳಿತಿರುವುದೂ ಅಕ್ಕ ಪಕ್ಕ" ಎಂದೆ. ಆ ವೃದ್ಧನು ತಕ್ಷಣ ಒಂದು ರೀತಿಯ ಭಾವಾವೇಶಕ್ಕೆ ಒಳಗಾಗಿ, ಥಟ್ಟನೆ ಎದ್ದು ಬಂದು, ನನ್ನ ಕೈಯನ್ನು ತನ್ನೆರಡೂ ಕೈಗಳಲ್ಲಿ ಬಿಗಿಯಾಗಿ ಹಿಡಿದು, "ನಾವು ಒಂದೇ ಮನೆಯಲ್ಲಿ ಒಟ್ಟಿಗೆ ಅಣ್ಣ ತಮ್ಮಂದಿರಂತೆ ಇರಬೇಕಾದವರು. ಈ ಅಕ್ಕ ಪಕ್ಕ ತನ ಬೇಡವಾಗಿತ್ತು" ಎಂದು ಗದ್ಗದಿತನಾಗಿ ನುಡಿದ. ಅವನ ಕಣ್ಣಾಲಿಗಳು ತುಂಬ ಬಂದಿದ್ದವು. ಒಂದೆರಡು ತೊಟ್ಟು ಕೆಳಗಿಳಿದವು. ನಾನೆಂದೆ, "ರಾಜಕೀಯಕ್ಕೆ ಎಲ್ಲಿಯವರೆಗೆ ನಾವು ಮಹತ್ವ ಕೊಡುತ್ತೇವೋ ಅಲ್ಲಿಯವರೆಗೆ ನಮ್ಮ ಭಾವನೆಗಳಿಗೆ ಬೆಲೆ ಇರುವುದೇ ಇಲ್ಲ. ಸಾಮಾನ್ಯರ ಆತ್ಮೀಯ ಭಾವನೆಗಳು ಮೇಲುಗೈ ಪಡೆದರೆ ಇವೆಲ್ಲ ಬದಲಾಗಲು ಸಾಧ್ಯ. ಅಲ್ಲಿಯವರೆಗೆ ನಾವು – ನೀವು ಎಲ್ಲ ರಾಜಕೀಯದ ಅಡಿಯಾಳುಗಳೇ" ಆ ವೃದ್ಧ ವಿಷಾದದಿಂದ ಹೌದೆಂದು ತಲೆಯಾಡಿಸಿದ.

ಸ್ವಲ್ಪ ಹೊತ್ತಿನಲ್ಲೇ ಕರಾಚಿ ಬಂತು. ಆತ ಇಳಿಯುವ ಮುಂಚೆ ನನ್ನನ್ನು ತಬ್ಬಿ, ಹಣೆಗೆ ಮುತ್ತಿಟ್ಟು, "ನೀವು ಚೆನ್ನಾಗಿರಿ" ಎಂದು ಎರಡೆರಡು ಬಾರಿ ಅಂದ. ಅವನ ಹೆಂಡತಿಯೂ ನನ್ನ ತಲೆಯನ್ನು ಸವರಿ ಗಲ್ಲವನ್ನು ತಟ್ಟಿ ತನ್ನ ಚೀಲದಿಂದ ಸಿಹಿಯ ಒಂದು ಪೊಟ್ಟಣವನ್ನು ತೆಗೆದು ನನ್ನ ಕೈಗೆ ತುರುಕಿದಳು. ಅವಳ ಕಣ್ಣುಗಳೂ ತುಂಬಿ ಬಂದಿದ್ದವು. ನನ್ನ ಹೃದಯವೂ ಒಂದು ರೀತಿಯ ಅವ್ಯಕ್ತ ವೇದನೆಯಿಂದ ಕ್ಷಣಕಾಲ ನರಳಿತು.

ವಿಮಾನದಲ್ಲಿ ಚಳಿಗೆ ಹೊದ್ದುಕೊಳ್ಳಲೆಂದು ಪ್ರತಿಯೊಬ್ಬರಿಗೂ ಒಂದೊಂದು ಉಣ್ಣೆಯ ಶಾಲನ್ನು ಕೊಡುತ್ತಾರೆ. ಇಳಿಯುವ ಮುಂಚೆ ಅದನ್ನು ಅಲ್ಲಿಯೇ ಸೀಟಿನ ಮೇಲೆ ಬಿಟ್ಟು ಹೋಗಲು ತಿಳಿಸುತ್ತಾರೆ. ಈ ಕಡೆ ಪಾಕಿಸ್ತಾನಿ ದಂಪತಿಗಳು ಇಳಿದಾದ ಮೇಲೆ, ಅವರ ಪಾಲಿನ ಶಾಲುಗಳನ್ನು ಅವರ ಪಕ್ಕದಲ್ಲಿದ್ದ ಪಾಂಡಿಚೇರಿಯಾತ ಸಣ್ಣಗೆ ಮಡಿಚಿ ತನ್ನ ಕೈ ಚೀಲದ ಜಿಪ್ಪನ್ನೆಳೆದು ಒಳತುರುಕಿದ. ನಾವು ಆತನನ್ನು ಗಮನಿಸುತ್ತಿರುವುದನ್ನು ಕಂಡು "ನೀವೂ ನಿಮ್ಮದನ್ನು ಚೀಲದಲ್ಲಿ ಹಾಕಿಕೊಳ್ಳಿ. ಈ ವಿಮಾನದಲ್ಲಿ ಟಿಕೇಟ್ ಬೆಲೆ ಜಾಸ್ತಿ" ಎಂದ. ನನಗಂತೂ ಅದನ್ನು ನೋಡಿ, ಅವನ ಮಾತನ್ನು ಕೇಳಿ 'ನಾನು ಭಾರತಕ್ಕೆ ಮರಳುತ್ತಿರುವುದು' ಎಂಬುದು ಪೂರ್ತಿ ಖಾತ್ರಿಯಾಯಿತು. ನನ್ನ ಜೊತೆಗಾರ, "ಅವರಿಗೆ ವಯಸ್ಸಿಗೆ ತಕ್ಕ ತಿಳುವಳಿಕೆಯಾದರೂ ಬೇಡವೇ" ಎಂದು ಗೊಣಗುತ್ತಿದ್ದ. ಕೆಲವಾರು ಗಂಟೆಗಳಲ್ಲಿ ಭಾರತವೂ ಬಂದಿತು. ಆತ ಇಳಿಯುವ ಮುಂಚೆ ತನ್ನ ಶಾಲನ್ನು ಕೈ ಚೀಲಕ್ಕೆ ತುರುಕಿಕೊಂಡು ನಿಸ್ಸಂಕೋಚವಾಗಿ ಹೋಗುತ್ತಿದ್ದ. ★

'ನಮ್ಮ ಹಿರಿಯರು ಹೇಳುತ್ತಿದ್ದರು. ನೆಲದ ಮೇಲೆ ಹೆಜ್ಜೆಯಿಡುವಾಗ ಜಾಗರೂಕರಾಗಿರು. ಈ ಮಣ್ಣಿನೊಳಗಿಂದ ಭವಿಷ್ಯದ ತಲೆಮಾರುಗಳು, ತಮ್ಮ ಹುಟ್ಟಿನ ಅವಕಾಶಕ್ಕಾಗಿ ಕಾದಿರುತ್ತವೆ.'

– ಓರೆನ್ ಲಿಯಾನ್ಸ್

(ಅಮೆರಿಕನ್ ಇಂಡಿಯನ್ನರ ನಾಯಕ)

ಗಾಂಧೀಯ ಯೋಜನೆಯೆಂದರೇನು?

—ಕೆ. ಎಸ್. ನಾರಾಯಣಸ್ವಾಮಿ

ಭಾರತದ ಲಕ್ಷಾಂತರ ಗ್ರಾಮಗಳಿಗೆ ಸರ್ವೋದಯ ಸಮಾಜ ವ್ಯವಸ್ಥೆಯನ್ನು ನೀಡುವ ನಿಟ್ಟಿನಲ್ಲಿ ಸಮಗ್ರ ಪುನರ್ರಚನೆಯ ಕಲ್ಪನೆಯನ್ನು ಗಾಂಧೀಜಿ ಜುಲೈ ೧, ೧೯೨೬ ರ 'ಯಂಗ್ ಇಂಡಿಯಾ' ಪತ್ರಿಕೆಯಲ್ಲಿ ನೀಡಿದ್ದರು. ಅವರು ಹೀಗೆ ಬರೆದಿದ್ದರು. "ನನ್ನನ್ನು ದೃಷ್ಟಾರ ಎಂದು ತಪ್ಪಾಗಿ ಕರೆಯುವವರಿದ್ದಾರೆ. ಈ ದೇಶದ ಅತಿ ದಲಿತ ಮನುಷ್ಯನನ್ನು ಅರ್ಥಮಾಡಿಕೊಳ್ಳುವ ವಿನೀತ ಮನುಷ್ಯನಾಗಿ ನಾನು, ನನಗೆ ಚಕ್ರವರ್ತಿಯ ಅಧಿಕಾರವಿದ್ದರೆ ಏನೇನು ಮಾಡಬಲ್ಲೆ ಎಂದು ಇಲ್ಲಿ ಹೇಳಬಯಸುವೆ.

ಮಾನವ ಜನಾಂಗವಿಡೀ ದೇವನೊಬ್ಬನ ಮಕ್ಕಳು ಎಂದು ಭಾವಿಸಿ ಸಹ ಚರತ್ವದ ಕೈನೀಡುವೆ. ಆತ್ಮೋನ್ನತಿಯ ಸಾಮರ್ಥ್ಯ ಎಲ್ಲರಲ್ಲೂ ಇದೆ. ಅತಿ ದೂರದ ಜನಾಂಗಗಳ ಜೊತೆಯೂ ನಾನು ಸ್ನೇಹಶೀಲ ಸಂಬಂಧವನ್ನು ಕಲ್ಪಿಸುವೆ. ಅವರ ಪ್ರಾಕೃತಿಕ ಪರಿಸರವನ್ನು ನೆಟ್ಟಗಿಟ್ಟುಕೊಂಡು ಬಾಳುವೆಗೆ ದಾರಿ ಕಲ್ಪಿಸುವತ್ತ ಮಾರ್ಗದರ್ಶನ ಮಾಡಬಲ್ಲ ಸುಧಾರಕರನ್ನು ಅವರಲ್ಲಿಗೆ ಕಳಿಸುವೆ. ಶೋಷಣೆ ರಹಿತ ವೃತ್ತಿಯಲ್ಲಿ ತೊಡಗಿರುವ ಎಲ್ಲ ವಿದೇಶಿಯರಿಗೂ, ದೇಶೀಯರಿಗೂ ಪೂರ್ಣ ರಕ್ಷಣೆ ನೀಡುವೆ. ಎಲ್ಲ ವಿದೇಶಿ ಬಟ್ಟೆಗಳ ಮೇಲೂ ದುಬಾರಿ ಕರ ವಿಧಿಸಿ, ಖಾದಿಯನ್ನು ರಾಜ್ಯ ನಿಯಂತ್ರಣಕ್ಕೊಳಪಡಿಸುವೆ. ತನ್ಮೂಲಕ ನೂಲಬಯಸುವ ಪ್ರತಿಯೊಬ್ಬ ಹಳ್ಳಿಗನಿಗೂ ತನ್ನ ಉತ್ಪನ್ನವು ಮಾರಾಟವಾಗುತ್ತದೆ ಎಂಬ ಭಾವನೆ ಮೂಡಿಸುವೆ. ಎಲ್ಲಾ ವಿದೇಶೀ ಮದ್ಯಗಳನ್ನು ನಿಷೇದಿಸಿ, ವೈದ್ಯಕೀಯ ಕಾರಣಗಳನ್ನುಳಿದು ಮತ್ತೆಲ್ಲಾ ಮದ್ಯಗಳ ಭಟ್ಟಿ ಇಳಿಸುವಿಕೆಯನ್ನು ಪ್ರತಿಬಂಧಿಸುವೆ. ಎಲ್ಲಾ ಉಪಯೋಗಿ ಗ್ರಾಮೀಣ ಕೈಗಾರಿಕೆಗಳಿಗೂ ರಕ್ಷಣೆ ನೀಡುವೆ. ಮನುಷ್ಯ ಜನಾಂಗದ ನೈತಿಕ ಪ್ರಜ್ಞೆಗೆ ವಿರೋಧವಾಗಿರುವುದನ್ನುಳಿದು ಮತ್ತೆಲ್ಲಾ ಧಾರ್ಮಿಕ ಆಚರಣೆಗಳಿಗೂ ಪೂರ್ಣ ಸ್ವಾತಂತ್ರ್ಯ ನೀಡುವೆ.

ಎಲ್ಲ ಸಾರ್ವಜನಿಕ ಸಂಸ್ಥೆಗಳು, ದೇವಾಲಯಗಳು, ಶಾಲೆಗಳಲ್ಲಿ ಅಸ್ಪೃಶ್ಯರಿಗೆ ಮುಕ್ತ ಪ್ರವೇಶ ಒದಗಿಸುವೆ. ಹಿಂದೂ ಮುಸ್ಲಿಂ ನಾಯಕರನ್ನು ಕರೆದು ಸಮಸ್ಯೆಗಳನ್ನು ಸ್ನೇಹಪೂರ್ವಕ ಪರಿಹರಿಸಿಕೊಳ್ಳುವರೆಗೂ ಒಂದು ಕೊಠಡಿಯಲ್ಲಿ ಕೂಡಿ ಹಾಕುವೆ."

ಈ ಮಾತುಗಳನ್ನು ನೆನಪಿಸಿಕೊಳ್ಳುವ ಸಂದರ್ಭ ಬಂದಿದೆ. ಸಾಮಾಜಿಕ ನ್ಯಾಯದ ಜೊತೆ ಆರ್ಥಿಕ ಪುನರ್ರಚನೆಯನ್ನು ಪ್ರಜಾಸತ್ತಾತ್ಮಕ ಯೋಜನೆಯ ಮೂಲಕ ಸಾಧಿಸುವ ನಮ್ಮ ನಲವತ್ತೆರಡು ವರ್ಷಗಳ ಪ್ರಯತ್ನದಲ್ಲಿ ನಾವು ಎಡವಿದ್ದೇವೆ. ಗಾಂಧೀಯ ದೃಷ್ಟಿಕೋನವನ್ನು ತಿರಸ್ಕರಿಸಿದ್ದೇ ಈ ವೈಫಲ್ಯಕ್ಕೆ ಕಾರಣ. ಬ್ರಿಟಿಷ್ ಸಾಮ್ರಾಜ್ಯಶಾಹಿಯಲ್ಲಿ ಮೆರೆದ ನೌಕರಶಾಹಿ ಮತ್ತು ನಗರೀಕೃತ ಮೇಲ್ವರ್ಗ ಇಂದು ಬ್ರಿಟಿಷರ ಕೆಲಸವನ್ನೇ ಮುಂದುವರಿಸುತ್ತಿವೆ. ನಮ್ಮ ಗ್ರಾಮಗಳನ್ನು ಬಡಗೊಳಿಸಿ ಅಲ್ಲಿನ ಸಂಪನ್ಮೂಲಗಳನ್ನು ದೋಚುವ ಕೆಲಸ ನಡೆಯುತ್ತಿದೆ. ಒಂದೆಡೆ ಮಿನುಗುವ ನಗರಗಳು, ಇನ್ನೊಂದೆಡೆ ನಿತ್ಯದಾರಿದ್ರ್ಯ, ಸಂಕಟ, ನಿರುದ್ಯೋಗಗಳ ನಮ್ಮ ಹಳ್ಳಿಗಳ ಕೊಳಚೆ ಪ್ರದೇಶಗಳು ಈ ವೈರುಧ್ಯ ನಮ್ಮ ಸಾಮಾಜಿಕ ಆರ್ಥಿಕ ಯೋಜನೆಗೆ ಒಂದು ಸವಾಲು. ಏಳು ದುಬಾರಿ ಯೋಜನೆಗಳ ಬಳಿಕವೂ ಇದು ಉಳಿದಿದೆ. ದೆಹಲಿಯ ಹೊಸ ಸುಲ್ತಾನರು ನಮ್ಮ ಮೇಲೆ ಹೇರಿದ ಯೋಜನೆಗಳಿವು.

ಇಂದು ನಮ್ಮಲ್ಲಿ ಆಧುನಿಕತೆಯ ವಿಕೃತ ಕಲ್ಪನೆ ಇದೆ. ಈ ಪ್ರಕ್ರಿಯೆಯಲ್ಲಿ ಹಳ್ಳಿಗಳು, ಸಾಮಾನ್ಯಜನತೆ ಬೇರುಗಳನ್ನು ಕಳಕೊಂಡು ಸಾಲ, ಬೆಲೆ ಏರಿಕೆ, ಭ್ರಷ್ಟಚಾರ, ಅಮಾನವೀಯತೆಯ ಸುಳಿಯಲ್ಲಿ ಬಿದ್ದಿದ್ದಾರೆ. ಪರಿಸರನಾಶ, ಭೂಸವೆತ, ಜನಸಂಖ್ಯೆಯ ಆಸ್ಫೋಟಗಳಿಂದಾಗಿ ಈ ದೇಶಕ್ಕೆ ಭೀಕರ ದುಸ್ಥಿತಿ ಒದಗಿ ಬರಬಹುದಾದ್ದರ ಬಗ್ಗೆ ಸ್ಪಂದನಶೀಲ ವ್ಯಕ್ತಿಗಳು ಆತಂಕಕ್ಕೊಳಗಾಗಿದ್ದಾರೆ.

ಸಾಮಾಜಿಕ ಒಳಕುದಿತ, ಕತ್ತುಕುಯ್ಯುವ ನೀಚ ಸ್ಪರ್ಧೆ, ಧಗಾಕೋರ ಪ್ರವೃತ್ತಿ ನಮ್ಮ ಹಳ್ಳಿಗಳ ಪಾರಂಪರಿಕ ಶಾಂತಿಯನ್ನು ಮುರಿದು ಮುಕ್ಕುತ್ತಿವೆ. ಸಹಕಾರಿ, ಸ್ವಸಹಾಯ ಸ್ವಸಂತುಷ್ಟ ಸಾಮಾಜಿಕ ಹಂದರ ಹೊಂದಿದ್ದ ಹಳ್ಳಿಗಳು ಶಿಥಿಲವಾಗಿ ಮನುಷ್ಯ ಸಂಬಂಧವೂ ಮುಕ್ಕಾಗುತ್ತಿದೆ.

ನಮ್ಮ 'ಪ್ರಗತಿ'ಯಿಂದ ಹುಟ್ಟಿದ ದುಷ್ಪರಿಣಾಮಗಳನ್ನು ಎದುರಿಸಲಾರದ ಅಸಹಾಯಕ ಸ್ಥಿತಿಯಲ್ಲಿ ಇಂದು ನಾವು ಗಾಂಧಿ ಹಾದಿಯತ್ತ ನೋಡುತ್ತಿದ್ದೇವೆ.

ಗಾಂಧಿ ಅರ್ಥಶಾಸ್ತ್ರದ ಪಂಡಿತರೇನೂ ಆಗಿರಲಿಲ್ಲ. ಪ್ರಕೃತಿ ಮತ್ತು ಮನುಷ್ಯನನ್ನು ದುಸ್ಥಿತಿಗಿಳಿಸಿ ಆರ್ಥಿಕ ಸಂಪನ್ನತೆಯನ್ನು ಸಾಧಿಸುವುದನ್ನು ಅವರು ಪರಿಭಾವಿಸಲಿಲ್ಲ. ಸಮಷ್ಟಿಯ ಅರ್ಥಪೂರ್ಣ ಸಮಗ್ರ ಸಂಪನ್ನತೆಯನ್ನು ಅವರು ಕಲ್ಪಿಸಿದ್ದರು. ಆಸೆಬುರುಕ, ಕೊಡಿಡುವ ಸಮಾಜದ ಬದಲು ಹಂಚಿಕೊಂಡು

ಬಾಳಲೆಳೆಸುವ ಪುಟ್ಟಪುಟ್ಟ ಸಹಕಾರೀ ಸಮುದಾಯಗಳನ್ನು ಸ್ಥಾಪಿಸುವುದು ಅವರ ಉದ್ದಿಶ್ಯವಾಗಿತ್ತು.

ನಾವೆಲ್ಲ ಬದುಕಿ, ಹೆರರನ್ನೂ ಬಾಳಗೊಡುವುದಕ್ಕೆ ಅಹಿಂಸಾ ಸಂಸ್ಕೃತಿಯೊಂದು ಅನಿವಾರ್ಯ ಎಂದವರು ನಂಬಿದ್ದರು.

ಭೂಮಿಯ ಸಂಪತ್ತನ್ನು ಬಳಸಿಕೊಳ್ಳುವುದೆಂದರೆ ಪರಸ್ಪರರನ್ನು ಅರ್ಥೈಸಿ ಕೊಳ್ಳುವ, ಪ್ರೀತಿಸುವ ಪ್ರಕ್ರಿಯೆ. ತನ್ಮೂಲಕ ಮುಂಬರುವ ಪೀಳಿಗೆಗಳಿಗೆ ಯುದ್ಧ, ಪಿಡುಗು ಬಡತನಗಳಿಲ್ಲದ ಪ್ರಪಂಚವೊಂದನ್ನು ದತ್ತವಾಗಿಡುವ ಪ್ರಯತ್ನ ಕೂಡಾ. ಸಮಾನತೆ ಸ್ವಾತಂತ್ರ್ಯ, ಸಹಬಾಳ್ವೆ ಕೇವಲ ರಾಜಕೀಯ ಸ್ಲೋಗನ್ನು ಗಳಾಗದೇ, ಜನರ ದಿನ ನಿತ್ಯದ ಬಾಳಿನ ನಾಡಿಮಿಡಿತವಾಗಬೇಕು.

ಈ ಹಿನ್ನೆಲೆಯಲ್ಲಿ ಗಾಂಧಿ ಚಿಂತನೆಯ ಮೊದಲಘಟ್ಟ- ಜನ ಸಾಮಾನ್ಯರ ಸದ್ಬುದ್ಧಿಯ ಬಗ್ಗೆ ಸಹಜನಂಬಿಕೆ. ಪರಸ್ಪರ ಸಹಕಾರದ ಮೂಲಕ ಬಟ್ಟೆ ಬರೆ, ಆಹಾರ, ವಸತಿಗಳನ್ನು ಪೂರೈಸುವ, ಕೃಷಿರಂಗವನ್ನಾಧರಿಸಿರುವ ಸ್ವತಂತ್ರ ಸಮು ದಾಯಗಳ ಬಗ್ಗೆ ಗಾಂಧಿಗೆ ನಂಬುಗೆಯಿತ್ತು. ಅವರ ಮಾತುಗಳಲ್ಲೇ ಹೇಳುವು ದಾದರೆ.

"ದಾರಿದ್ರ್ಯದಿಂದ ತುಂಬಿದ ಕೋಟ್ಯಾಂತರ ಮುಗ್ಧರ ನಾಡನ್ನಾಗಿ ಭಾರತವನ್ನು ನಾನು ಕಲ್ಪಿಸಿಕೊಳ್ಳುವುದಿಲ್ಲ. ತನ್ನ ಅಗತ್ಯಗಳಿಗೆ ತಕ್ಕಂತೆ ಪ್ರಗತಿ ಹೊಂದುವ ಭಾರತವನ್ನು ನಾನು ಊಹಿಸುವೆ. ಅಂದರೆ ಪಶ್ಚಿಮದ ಸಾಯುತ್ತಿರುವ ಮೂರನೇ ದರ್ಜೆ ಅಥವಾ ಪ್ರಥಮ ದರ್ಜೆಯ ನಾಗರಿಕತೆಗಳನ್ನು ನಾವು ನಕಲು ಹೊಡೆಯ ಬೇಕಾಗಿಲ್ಲ.

ನನ್ನ ಕನಸು ನನಸಾದರೆ, ಈ ದೇಶದ ಏಳು ಲಕ್ಷ ಹಳ್ಳಿಗಳೂ ಅನಕ್ಷರಸ್ಥರಿಲ್ಲದ ಗಣರಾಜ್ಯಗಳಾಗುತ್ತವೆ. ಕೆಲಸವಿಲ್ಲದೇ ಕಾಲಕೊಲ್ಲುವ ಮಂದಿಯೇ ಇರುವುದಿಲ್ಲ. ಒಳ್ಳೆಯ ಆಹಾರ, ತೃಪ್ತಿಯ ಕೆಲಸ, ಗಾಳಿ ಬೆಳಕಿನ ಮನೆ ಮೈತುಂಬುವ ಬಟ್ಟೆ, ಆರೋಗ್ಯ ನೈರ್ಮಲ್ಯಗಳು ಪ್ರತಿಯೊಬ್ಬರ ಪಾಲಿಗೆ ದೊರೆಕುತ್ತದೆ. ನಿಂತ ನೀರಾಗ ದಂತೆ ತನ್ನ ವೈವಿಧ್ಯಮಯ ಅಗತ್ಯಗಳನ್ನು ಪೂರೈಸುವ ರಾಜ್ಯ ಅದಾಗಿರುತ್ತದೆ.''

ಈ ದೃಷ್ಟಿಯನ್ನು ಒಪ್ಪಿಕೊಂಡರೆ, ಈಗಿನ ದಿಕ್ಕು ತಪ್ಪಿದ ಆಧುನೀಕರಣ ನಮ್ಮ ಗ್ರಾಮ ಸಮುದಾಯವನ್ನು ಹೊಲಗೆಡಿಸಿದೆ ಎಂಬುದು ಅರಿವಿಗೆ ಬಂದರೆ, ನಾವು ಗಾಂಧಿ ಪ್ರಣೀತ ಪುನರ್ರಚನಾ ಕಾರ್ಯಕ್ರಮವನ್ನು ಮತ್ತೆ ಆರಂಭಿಸಬೇಕು. ಇದು ಹೇಗೆ ಸಾಧ್ಯ ಎಂಬ ಬಗ್ಗೆ ಯೋಚಿಸೋಣ.

ಪ್ರಜಾಪ್ರಭುತ್ವವೆಂದರೆ ಚುನಾಯಿತ ಪ್ರತಿನಿಧಿಗಳಿರುವ ರಾಜಕೀಯ ಧೋರಣೆ ಯಷ್ಟೇ ಅಲ್ಲ. ತಮಗೆ ಒಳಿತಾಗುವ ಹಾದಿಯನ್ನು ತಮ್ಮೆಲ್ಲ ಶಕ್ತಿ ಸಾಮರ್ಥ್ಯಗಳ

ಮೂಲಕ ನಿಜಗೊಳಿಸುವ ಪ್ರಯತ್ನ ಕೂಡಾ. 'ಭಾರತದ ಗ್ರಾಮೀಣ ಆರ್ಥಿಕತೆ' ಎಂಬ ಪುಸ್ತಕದಲ್ಲಿ ನಮ್ಮ ಬಹು ಮುಖ್ಯ ಚಿಂತಕರಲ್ಲೊಬ್ಬರಾದ ಡಾ॥ ರಾಧಾ ಕುಮುದ್ ಮುಖರ್ಜಿ ಹೀಗೆ ಬರೆದಿದ್ದಾರೆ. "ಮನುಷ್ಯ ಪ್ರಕೃತಿಯ ಸಂಪನ್ಮೂಲಗಳನ್ನು ಖಾಲಿ ಮಾಡುವವನಷ್ಟೇ ಅಲ್ಲ, ತಾನು ಬದುಕುವ ಪರಿಸರದ ಸಮತೋಲನವನ್ನು ಅಡಿತಪ್ಪಿಸುವವನು ಕೂಡಾ.

ತನ್ನ ಕೆಡುಕಿನ ಶಕ್ತಿಯಿಂದ ತನ್ನನ್ನೂ, ತಾನು ಸೃಷ್ಟಿಸಿದ ನಾಗರಿಕತೆಯನ್ನು ನಾಶಗೊಳಿಸುತ್ತಾನೆ. ಪ್ರಾಕೃತಿಕ ಸಮತೋಲನಕ್ಕೆ ಸರಿಯಾದ ಜೀವ ಪ್ರಕ್ರಿಯೆಯನ್ನು ಮರು ಸೃಷ್ಟಿಸುವುದರ ಮೂಲಕವಷ್ಟೇ ಮನುಷ್ಯ ನಾಗರಿಕತೆಯನ್ನು ಮತ್ತೆ ಕಟ್ಟಬಹುದು. ನಿಜವಾದ ಆರ್ಥಿಕ ಯೋಜನೆ ಹಳ್ಳಿಗಳನ್ನು ಕೈಗಾರಿಕೀಕೃತಗೊಳಿಸಿ ನಗರಗಳನ್ನು ಗ್ರಾಮ್ಯವಾಗಿಸುತ್ತದೆ. ಯಾರಿಗೋಸ್ಕರ ಯೋಜನೆ ಸಿದ್ಧವಾಗಿರುತ್ತದೆ ಅನ್ನುವುದು ಮುಖ್ಯ ಪ್ರಶ್ನೆ. ನಮ್ಮ ಯೋಜಕರು ಸಮಾನತೆ, ರಕ್ಷಣೆ, ನ್ಯಾಯ, ಸ್ವಾತಂತ್ರ್ಯ ಮತ್ತು ಸಾಮಾಜಿಕ ಪಾಲ್ಗೊಳ್ಳುವಿಕೆಯನ್ನು ಮರೆತಿದ್ದಾರೆ. ಇವಿಲ್ಲದೇ ಸಮಗ್ರ ಅಭಿವೃದ್ಧಿ ಸಾಧ್ಯವೇ ಇಲ್ಲ' ಎಂದು ಅವರು ೧೯೩೩ ರಲ್ಲಿ ವಾದಿಸಿದ್ದರು.

ಗಾಂಧಿ ಪ್ರವಾದಿಯ ಮಾತುಗಳಲ್ಲಿ ಹೇಳಿದ್ದನ್ನು ಡಾ॥ ಮುಖರ್ಜಿ ವೈಚಾರಿಕ ನೆಲೆಗಟ್ಟಿನಲ್ಲಿ ಹೇಳಿದ್ದರು. ಈ ನೆಲೆಯಲ್ಲಿ ಯೋಜಕರಿಗೊಂದು ಚೌಕಟ್ಟು ಒದಗಿಸಿದ್ದರು.

ಸಂಪತ್ತು, ಲಕ್ಸುರಿ ವಸ್ತುಗಳು, ಪ್ರಕೃತಿಯ ಮೇಲೆ ತಂತ್ರ ಜ್ಞಾನದ ಧಾಳಿ, ಅಧಿಕಾರದ ಅವಿರತ ಹಂಬಲ, ನೈತಿಕ ಅಧಃಪತನದ ಸಮಾಜವಷ್ಟೇ ನಮ್ಮ ಯೋಜಕರ ಗುರಿಯಾಗಿರುವಂತಿದೆ. ಈ ಬಗ್ಗೆ ಬಂದ ಎಲ್ಲ ಎಚ್ಚರಿಕೆಗಳಿಗೂ ಅವರು ಕಿವುಡಾಗಿದ್ದಾರೆ ಗಾಂಧಿ ದಾರಿ ಈ ಪ್ರಕ್ರಿಯೆಯನ್ನೇ ತಲೆಕೆಳಗು ಮಾಡಬಲ್ಲದು. ಗ್ರಾಮೀಣ ಭಾರತವನ್ನು ಸಾಮಾಜಿಕ ಆರ್ಥಿಕ ಪುನರ್ರಚನೆಯ ಕೇಂದ್ರವಾಗಿ ಅದು ಕಲ್ಪಿಸಿಕೊಳ್ಳುತ್ತದೆ.

ಭಾಗ ೨

ಭಾರತದ ಸದ್ಯದ ಸಾಮಾಜಿಕ-ಆರ್ಥಿಕ ಸಂದರ್ಭದಲ್ಲಿ ನಿಜವಾದ ಪ್ರಗತಿಗೆ ಬೇಕಾದ ಜೀವ ಕೇಂದ್ರಿತ ಯೋಜನೆಯ ಲಕ್ಷಣಗಳೇನು? ಸದ್ಯದ ಹಳಿತಪ್ಪಿರುವ ಅಭಿವೃದ್ಧಿಯನ್ನು ಬಿಟ್ಟು, ಸಮಗ್ರ ಅಭಿವೃದ್ಧಿಯ ಕಲ್ಪನೆಯನ್ನು 'ಪರಿಸರ ಮಾನವತಾವಾದ' ಎಂದು ಕರೆಯಬಹುದು. ಪ್ರಕೃತಿ ಮತ್ತು ಸಹಜೀವಿಗಳೊಡನೆ ಸೌಹಾರ್ದದಿಂದ ಬಾಳುವುದು ಗಾಂಧೀ ದೃಷ್ಟಿಯಲ್ಲಿ ಬಹು ಮುಖ್ಯ. ಆದ್ದರಿಂದ ಪರಿಸರ ಮಾನವತಾವಾದದ ಲಕ್ಷಣಗಳನ್ನು ಹೀಗೆ ಸಂಗ್ರಹಿಸಿ ಹೇಳಬಹುದು.

೧ ಮನುಷ್ಯ ಸಂಬಂಧಗಳಲ್ಲಿ ಅನೈತಿಕವಾಗಿರುವುದು ಆರ್ಥಿಕ, ರಾಜಕೀಯ, ಸಾಮಾಜಿಕ ಸಂಘಟನೆಗಳಿಗೂ ಒಳಿತು ತಾರದು.

೨ ಗಾಳಿ, ನೀರು ಬೆಳಕು-ನೆಲವನ್ನಾಧರಿಸಿ ಪ್ರಪಂಚದ ಮುಕ್ಕಾಲು ಪಾಲು ಜನ ಬಾಳುತ್ತಿದ್ದಾರೆ. ಪ್ರಕೃತಿಯು ಅವಿನಾಶೀ ನಿಯಮಗಳು ಜೀವಚಕ್ರವನ್ನು ನಿಯಂತ್ರಿಸುತ್ತಿವೆ. ಆದ್ದರಿಂದ ಜೀವನ ಯೋಜನೆಗೆ ಆಪ್ತ ಕೃಷಿ ಆಧಾರಿತ ಪುಟ್ಟ ಸಮುದಾಯುಗಳೇ ಒಳ್ಳೆಯದು ಭಾರತದ ಗ್ರಾಮ ಅಂಥಾ ಒಂದು ಸಮುದಾಯ.

೩ ಆಹಾರ, ಬಟ್ಟೆ, ವಸತಿಗಳ ಉತ್ಪಾದನೆ ಪೂರೈಕೆಗೆ, ಉದ್ಯೋಗ, ಆರೋಗ್ಯ ಶಿಕ್ಷಣಗಳ ನಿಭಾವಣೆಗೆ ಸಹಕಾರೀ ಪ್ರೇರಿತ ಸಂತುಷ್ಟ ಗ್ರಾಮ ಸಮುದಾಯುಗಳೇ ಯೋಗ್ಯ ಮೂಲಸ್ಥಾನ.

೪ ಉತ್ಪಾದನಾ ಸಾಮಾಗ್ರಿಗಳು ಹೇಗಿರಬೇಕೆಂದರೆ ತನ್ನ ಕೌಶಲ್ಯ ಮತ್ತು ಸ್ಥಳೀಯ ಕರ್ಮಿಗಳ ಸಹಕಾರದಿಂದಲೇ ನಡೆಯುವಂತಿರಬೇಕು. ತಂತ್ರಜ್ಞಾನವೂ ದಕ್ಷತೆಯನ್ನು ಹೆಚ್ಚಿಸಬೇಕೇ ಹೊರತು, ಕಾರ್ಮಿಕರನ್ನು ಹೊರದಬ್ಬಬಾರದು. ನೂಲುವ ಯಂತ್ರ ಮತ್ತು ಕೈಮಗ್ಗ ಈರೀತಿಯ ಯಂತ್ರಗಳ ಉತ್ಕೃಷ್ಟ ಮಾದರಿಗಳು.

೫ ಭೂಮಿ ಆಹಾರ ಉತ್ಪಾದನೆಯ ಸಾಧನವಷ್ಟೇ ಹೊರತು ಕೊಳ್ಳುವ–ಮಾರುವ ವಸ್ತುವೆಂದು ಪರಿಗಣಿತವಾಗಬಾರದು. ಗ್ರಾಮದ ಎಲ್ಲ ಕೃಷಿ ಭೂಮಿಯೂ ಸಮಷ್ಟಿಗೆ ಸೇರಿದ್ದು, ಅಗತ್ಯ ಆಹಾರ ಉತ್ಪಾದನೆಗಾಗಿ ಎಲ್ಲ ರೈತರಿಗೂ ಸಮಾನವಾಗಿ ಹಂಚಿಕೆಯಾಗಬೇಕು. ತಮ್ಮದೇ ಶ್ರಮದ ಉತ್ಪಾದನೆಯ ಮೇಲೆ ಅವರಿಗೆ ಹಕ್ಕಿರುತ್ತದೆ. ಅಗತ್ಯ ಆಹಾರದ ಉತ್ಪಾದನೆಯ ಬಳಿಕವಷ್ಟೇ. ಆರ್ಥಿಕ ಬೆಳೆಗಳ ಬಗ್ಗೆ ಚಿಂತಿಸಬೇಕು. ಇದು ಕೂಡಾ ಸಹಕಾರಿ ಕೃಷಿಗೊಳಪಟ್ಟಿರುತ್ತದೆ.

೬ ಬಂಡವಾಳ, ಶ್ರಮ ಮತ್ತು ನಿರ್ವಹಣೆ ಪರಸ್ಪರ ಅವಲಂಬಿತವಾಗಿರಬೇಕು. ಉತ್ಪನ್ನತೆಯ ಲಾಭ ಎಲ್ಲರಿಗೂ ಸಮಾನವಾಗಿ ಹಂಚಿಕೆಯಾಗಬೇಕು.

೭ ಉತ್ಪಾದನೆಯ ತಂತ್ರ ಮತ್ತು ಸಾಧನೆಗಳು ಸಂಪತ್ತನ್ನು ಹಂಬಲಿಸುವಂತಿರಬಾರದು. ಪ್ರಕೃತಿಯನ್ನು ದೋಚಲೂಬಾರದು. ಪುನರುಪಯೋಗಿಸಲುಬಾರದು ಎಲ್ಲ ಇಂಧನಗಳನ್ನು ಮಿತವಾಗಿ ಬಳಸುತ್ತಾ, ಪುನರುಪಯೋಗಿ ಇಂಧನ ಮೂಲಗಳಾದ ಪಶುಶಕ್ತಿ, ಪವನಶಕ್ತಿ, ಸೂರ್ಯಶಕ್ತಿ ಇತ್ಯಾದಿಗಳನ್ನು ಪೂರ್ಣವಾಗಿ ಬಳಸುವತ್ತ ಕಾರ್ಯ ಪ್ರವೃತ್ತನಾಗಬೇಕು.

೮ ಆಹಾರಕ್ಕಾಗಿ ಕೃಷಿ, ಬಟ್ಟೆಗಾಗಿ ಖಾದಿ, ಶಕ್ತಿಗಾಗಿ ಪಶುಪಾಲನೆ, ಗೋಬರ್ ಗ್ಯಾಸ್ ಮತ್ತು ಮಣ್ಣಿನ ಫಲವತ್ತತೆಗಾಗಿ ಕಾಂಪೋಸ್ಟ್, ಬಳಕೆ ವಸ್ತುಗಳಿಗಾಗಿ ಗುಡಿಕೈಗಾರಿಕೆ, ಬಂಡವಾಳ ಕೂಡಿಕೆಗಾಗಿ ಗ್ರಾಮೀಣ ಬ್ಯಾಂಕಿಂಗ್, ಸಮಾನ ಹಂಚಿಕೆಗಾಗಿ ಸ್ಥಳೀಯ ಮಾರುಕಟ್ಟೆ, ಕೊಳ್ಳುವ ಶಕ್ತಿಗಾಗಿ ಪೂರ್ಣ

೧೮ ನೇ ಪುಟ ನೋಡಿ

ಕೈಗಾರಿಕಾ ನೀತಿ : ಒಂದು ವಿಶ್ಲೇಷಣೆ

—ಪ್ರಭಾಕರ ಶಿಶಿಲ

ದೇಶದ ಕೈಗಾರಿಕಾಭಿವೃದ್ಧಿಗೆ ತಳಪಾಯ ಎನಿಸಿರುವ ೧೯೫೬ರ ಕೈಗಾರಿಕಾ ನೀತಿ ಸಮಾಜವಾದಿಯ ಚೌಕಟ್ಟಿನಲ್ಲಿ ಮಿಶ್ರ ಅರ್ಥವ್ಯವಸ್ಥೆಯ ಅಂಗೀಕಾರವೇ ಆಗಿತ್ತು. ಅದು ಖಾಸಗಿ ಮತ್ತು ಸಾರ್ವಜನಿಕ ರಂಗಗಳ ಸಹ ಅಸ್ತಿತ್ವಕ್ಕೆ ಅವಕಾಶ ನೀಡಿದರೂ, ಸಾರ್ವಜನಿಕ ರಂಗ ಹೆಚ್ಚು ಬಲವಾಗಿರುವಂತೆ ಮತ್ತು ಅದು ಖಾಸಗಿ ರಂಗದ ಮೇಲೆ ಹತೋಟಿ ಹೊಂದಿರುವಂತೆ ನೋಡಿಕೊಳ್ಳಲಾಗಿತ್ತು. ಕೈಗಾರಿಕಾ ನೀತಿಯ ಗುರಿ ಸಮಾಜವಾದೀ ಸಮಾಜ ಒಂದರ ರಚನೆ.

ಸಾರ್ವಜನಿಕ ರಂಗಕ್ಕೆ ಹೆಚ್ಚು ಆದ್ಯತೆ ಯಾಕೆನ್ನುವುದಕ್ಕೆ ಅಂದಿನ ಪ್ರಧಾನಿ ಜವಹರ ಲಾಲನೆಹರೂ ಹೇಳಿದ್ದು ಹೀಗೆ: "ಖಾಸಗಿ ಉದ್ದಿಮೆದಾರರು ಏಕ ಸ್ವಾಮ್ಯವಾದಿಗಳಾಗಬಾರದು ಮತ್ತು ಆರ್ಥಿಕ ಶಕ್ತಿಯನ್ನು ಕೇಂದ್ರೀಕರಿಸಲು ಯತ್ನಿಸಬಾರದು. ಆರ್ಥಿಕ ಶಕ್ತಿಯನ್ನು ಕೇಂದ್ರೀಕರಿಸುವ ನಿರ್ದಿಷ್ಟವಾದ ದೊಡ್ಡ ಪ್ರಮಾಣದ ಕೈಗಾರಿಕೆಗಳನ್ನು ಅವುಗಳು ಕೈಗೆತ್ತಿಕೊಳ್ಳಬಾರದು. ಇದರಿಂದ ಪ್ರಜಾಸತ್ತಾತ್ಮಕ ಸಮಾಜವಾದೀ ವ್ಯವಸ್ಥೆಯಲ್ಲಿ ಅತಿಶೀಘ್ರವಾಗಿ ವರ್ಗರಹಿತ ಸಮಾಜವನ್ನು ನಿರ್ಮಿಸಬಹುದು. ಸಮಾಜವಾದವೊಂದೇ ಭಾರತದ ಸಂಕಷ್ಟಗಳಿಗೆ ಪರಿಹಾರ."

ಇಂದಿಗೂ ದೇಶದ ಕೈಗಾರಿಕಾ ನೀತಿಗೆ ಮೂಲ ಚೌಕಟ್ಟು ಒದಗಿಸುವುದು ೧೯೫೬ ರ ನೀತಿ. ೧೯೯೦ರ ಮೇ ತಿಂಗಳಲ್ಲಿ ಪಾರ್ಲಿಮೆಂಟಲ್ಲಿ ಅಜಿತ್‌ಸಿಂಗ್ ಮಂಡಿಸಿದ ರಾಷ್ಟ್ರೀಯರಂಗ ಸರಕಾರದ ಔದ್ಯಮಿಕ ನೀತಿಗೂ ಆಧಾರ ನೆಹರೂರ ೧೯೫೬ ರ ಕೈಗಾರಿಕಾ ನೀತಿಯೇ.

೧೯೫೬ ರ ಕೈಗಾರಿಕಾ ನೀತಿ ೩೫ ವರ್ಷ ಹಳೆಯದಾದುದು. ನೆಹರೂ ಅವರಿಗೆ ಸಮಾಜವಾದದ ಸ್ಪಷ್ಟಕಲ್ಪನೆಯಿದ್ದು ರೂಪುಗೊಂಡ ನೀತಿಯದು. ಅವರ ಸಮಾಜ ವಾದವೆಂದರೆ ಉಸಿರು ಕಟ್ಟಿಸುವ ನಿಯಂತ್ರಣಗಳಲ್ಲ. ಸ್ವಾತಂತ್ರ್ಯ

ಇದ್ದರೂ ಆರ್ಥಿಕ ಸಮಾನತೆಯತ್ತ ಗುರಿನೆಟ್ಟ ಸಮಾಜವಾದ ಅದು. ನೆಹರೂರ ಬಳಿಕ ೧೯೭೩ ರಲ್ಲಿ ಕೈಗಾರಿಕಾ ನೀತಿ ತಿದ್ದುಪಡಿಯಾಯಿತು. ೧೯೭೭ ರಲ್ಲಿ ಜನತಾ ಸರಕಾರದ ಕೈಗಾರಿಕಾ ನೀತಿ ನಿರೂಪಿತವಾಯಿತು. ೧೯೮೦ ರಲ್ಲಿ ಇಂದಿರಾ ಗಾಂಧಿಯವರ ಕೈಗಾರಿಕಾ ನೀತಿ ಘೋಷಿತವಾಯಿತು. ೧೯೮೫ ರಲ್ಲಿ ರಾಜೀವಗಾಂಧಿಯವರ ಮತ್ತು ಇದೀಗ ವಿ. ಪಿ. ಸಿಂಗರ ಕೈಗಾರಿಕಾ ನೀತಿ ಘೋಷಿಸಲ್ಪಟ್ಟಿದೆ.

೧೯೮೫ ರ ಉದ್ಯಮ ನೀತಿ ಉದಾರವಾದಿ (Liberal) ಎಂಬ ಶ್ಲಾಘನೆಗೆ ಮತ್ತು ಟೀಕೆಗೆ ಒಳಗಾಯಿತು. ನೂತನ ಉದ್ಯಮ ನೀತಿಯನ್ನು 'ಸಮಾಜವಾದದ ಗೋರಿ' ಎಂದೇ ಕಟುವಾಗಿ ಟೀಕಿಸಲಾಗಿದೆ. ಇದಕ್ಕೆ ಮುಖ್ಯ ಕಾರಣ – ದೇಶದ ಔದ್ಯಮಿಕ ರಂಗದಲ್ಲಿ ವಿದೇಶೀ ಸಹಭಾಗಿತ್ವದ ಅಂದರೆ ಮುಖ್ಯವಾಗಿ ಬಹುರಾಷ್ಟ್ರೀಯ ಕಂಪೆನಿಗಳ (Multi – national Corporations) ಪಾತ್ರದ ಬಗೆಗಿನ ಪ್ರಶ್ನೆ.

ವಿದೇಶೀ ಬಂಡವಾಳದ ಬಗ್ಗೆ ೧೯೫೬ ರ ನೀತಿ ತೆರೆದ ಮನಸ್ಸು ಹೊಂದಿತ್ತು. ವಿದೇಶೀ ಬಂಡವಾಳವನ್ನು ಆಕರ್ಷಿಸಲು ಅದು ಅನೇಕ ಸೌಲಭ್ಯಗಳನ್ನು ಪ್ರಕಟಿಸಿತ್ತು. ವಿದೇಶೀ ಹೂಟೆದಾರರ ಬಂಡವಾಳ ಸುರಕ್ಷಿತವಾಗಿರುತ್ತದೆ ಮಾತ್ರವಲ್ಲ ರಾಷ್ಟ್ರೀಕರಣ ಅನಿವಾರ್ಯವಾದಲ್ಲಿ ಅವರಿಗೆ ಸಮರ್ಪಕವಾದ ಪರಿಹಾರ ಒದಗಿಸುವ ಭರವಸೆ ನೀಡಲಾಗಿತ್ತು. ನೆಹರೂ ಅವರು ವಿದೇಶೀ ಬಂಡವಾಳದ ಬಗ್ಗೆ ಸ್ಪಷ್ಟ ನಿಲುವು ಹೊಂದಿದ್ದರು. "ಭಾರತದ ಕೈಗಾರಿಕಾಭಿವೃದ್ಧಿಗೆ ವಿದೇಶೀ ಬಂಡವಾಳದ ಸಹಾಯಬೇಕು. ಏಕೆಂದರೆ ನಾವು ಇಚ್ಛಿಸಿದಷ್ಟು ಆರ್ಥಿಕಾಭಿವೃದ್ಧಿಯನ್ನು ಸಾಧಿಸಲು ನಮ್ಮ ಉಳಿತಾಯ ಕಡಿಮೆ ಇದೆ. ಎಂಬ ಒಂದೇ ಕಾರಣಕ್ಕಲ್ಲ; ವೈಜ್ಞಾನಿಕ, ತಾಂತ್ರಿಕ ಹಾಗೂ ಕೈಗಾರಿಕಾ ಜ್ಞಾನ ಮತ್ತು ಬಂಡವಾಳದ ಸಲಕರಣೆಗಳನ್ನು ಉತ್ತಮ ರೀತಿಯಲ್ಲಿ ಪಡೆಯಬಹುದು ಎಂಬ ಕಾರಣಕ್ಕಾಗಿಯೂ ಕೂಡಾ."

ನೆಹರೂ ಕಾಲದಲ್ಲಿ ವಿದೇಶೀ ಬಂಡವಾಳ ಸಮಸ್ಯೆ ಎನಿಸಲೇ ಇಲ್ಲ. ಅದರ ಪ್ರಮಾಣ ಕಡಿಮೆ ಇತ್ತು ಮತ್ತು ಅದು ಅರ್ಥವ್ಯವಸ್ಥೆಗೆ ಅನಿವಾರ್ಯವೂ ಆಗಿತ್ತು. ೧೯೭೩ ರಲ್ಲಿ ದತ್ತ ಸಮಿತಿಯ ಶಿಫಾರಸ್ಸಿನನ್ವಯ ಸಂಯುಕ್ತರಂಗ (Joint Sector) ದ ಸ್ಥಾಪನೆಯಾಯಿತು. ಸಂಯುಕ್ತ ರಂಗದಲ್ಲಿ ಉದ್ಯಮವು ಸರಕಾರಿ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ಸ್ಥಾಪಿಸಲ್ಪಡುತ್ತದೆ. ಸರಕಾರಕ್ಕೆ ನಿರ್ದೇಶನ ಮತ್ತು ನಿಯಂತ್ರಣದ ಜವಾಬ್ದಾರಿಯಿರುತ್ತದೆ.

ಇಲ್ಲಾದ ತೊಂದರೆಯೆಂದರೆ ೧೯೭೩ ರ ನೀತಿಯು 'ಸಂಯುಕ್ತ ರಂಗಕ್ಕೆ' ಸರಿಯಾದ ವ್ಯಾಖ್ಯೆಯನ್ನು ನೀಡದೆ ಹೋದದ್ದು. ಅದು ೧೯ ಅತಿ ಮುಖ್ಯ ಕೈಗಾರಿಕೆಗಳ ಪಟ್ಟಿಯೊಂದನ್ನು ತಯಾರಿಸಿತು. ಆದರೆ ಸರಕಾರವು ಇವುಗಳಲ್ಲಿ ಬಹುತೇಕ ಕೈಗಾರಿಕೆಗಳ ದ್ವಾರವನ್ನು ಖಾಸಗಿ ರಂಗಕ್ಕೆ ಮತ್ತು ಬಹುರಾಷ್ಟ್ರೀಯ

ಸಂಸ್ಥೆಗಳಿಗೆ ತೆರೆದಿರಿಸಿತು. ಅಲ್ಲದೆ ಇವಕ್ಕೆ ಗಣನೀಯ ರಿಯಾಯಿತಿಗಳನ್ನು ಕೂಡಾ ತೋರಿಸಿತು. ದೇಶದಲ್ಲಿ ಬಹುರಾಷ್ಟ್ರೀಯ ಕಂಪನಿಗಳು ಚಿಗಿತುಕೊಳ್ಳಲು ಕಾರಣ ವಾದ ೧೯೭೩ ರ ನೀತಿ ಇಂದಿನ ಅನೇಕ ಸಂಕಷ್ಟಗಳಿಗೆ ಕಾರಣವಾಯಿತು.

೧೯೭೭ ರ ಕೈಗಾರಿಕಾ ನೀತಿ ದೇಶ ಕಂಡ ಈವರೆಗಿನ ಉದ್ಯಮ ನೀತಿಗಳಲ್ಲೆಲ್ಲಾ ಉತ್ತಮವಾದುದು. ಅದು ಸಣ್ಣ ಮತ್ತು ಗೃಹಕೈಗಾರಿಕೆಗಳಿಗೆ ಮೀಸಲಾಗಿದ್ದ ಐಟಂ ಸಂಖ್ಯೆಯನ್ನು ೧೮೦ ರಿಂದ ೫೦೦ಕ್ಕೆ ಏರಿಸಿತು. ಬಹುರಾಷ್ಟ್ರೀಯ ಸಂಸ್ಥೆಗಳ ಸ್ವೇಚ್ಛೆಗೆ ಅಂಕುಶವಿರಿಸಿತು. ದೇಶೀ ಕಂಪನಿಗಳಲ್ಲಿ ವಿದೇಶೀ ಹೂಟೆಯ ಪ್ರಮಾಣ ಶೇ. ೪೦ ಕ್ಕಿಂತ ಅಧಿಕ ಇರಕೂಡದು ಎನ್ನುವ ನಿಯಮ ಜಾರಿಗೆ ಬಂತು. ಉದ್ದಿಮೆ ಗಳ ನಿರ್ವಹಣೆಯಲ್ಲಿ ಮೊದಲ ಬಾರಿಗೆ ಕಾರ್ಮಿಕರಿಗೂ ಪ್ರಾತಿನಿಧ್ಯ ಲಭ್ಯವಾಯಿತು. ಬಹುರಾಷ್ಟ್ರೀಯ ಕಂಪೆನಿ ಕೋಕಾಕೋಲಾ ಇದೇ ಸಂದರ್ಭದಲ್ಲಿ ದೇಶದಿಂದ ಕಾಲು ಕಿತ್ತದ್ದು.

ಆ ಬಳಿಕದ ೧೯೮೦ ರ ಕೈಗಾರಿಕಾ ನೀತಿ ಮತ್ತೊಮ್ಮೆ ಖಾಸಗಿ ಮತ್ತು ಸಂಯುಕ್ತರಂಗಕ್ಕೆ ಆದ್ಯತೆ ನೀಡಿತು. ರಾಜೀವ್‌ಗಾಂಧೀಯವರ ಕಾಲದಲ್ಲಂತೂ ವಿದೇಶೀ ಹೂಟೆಗೆ ಮತ್ತು ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಮುಕ್ತ ಸ್ವಾಗತ ದೊರೆ ಯಿತು. ಇವು ದಿನ ಬಳಕೆಯ ವಸ್ತುಗಳ (ಉದಾ ; ಉಡುಪು, ಹೆಂಚು, ಆಟದ ಸಾಮಾನು, ಪಾದರಕ್ಷೆ, ಅಡುಗೆ ಮಸಾಲೆ, ಸೋಪು, ಟೂತ್‌ಪೇಸ್ಟು ಮುಂತಾದವು ಗಳು) ಕ್ಷೇತ್ರಕ್ಕೂ ಕೈಹಾಕಿದ್ದು ಎಲ್ಲಾ ತೊಂದರೆಗಳಿಗೆ ಕಾರಣವಾಯಿತು. ಸುಮಾರು ೭೦ ರಷ್ಟು ಬಹುರಾಷ್ಟ್ರೀಯ ಸಂಸ್ಥೆಗಳು ನಮ್ಮ ನೆಲದಲ್ಲಿ ಬೇರುಬಿಟ್ಟು ಫಲವನ್ನು ತಮ್ಮ ತಮ್ಮ ಮಾತೃದೇಶಗಳಿಗೆ ನೀಡುತ್ತಿವೆ.

ರಾಷ್ಟ್ರೀಯ ರಂಗ ಸರಕಾರದ ಔದ್ಯಮಿಕ ನೀತಿಗೆ ಸಾರ್ವತ್ರಿಕ ವಿರೋಧ ಬಂದದ್ದು ಈ ಹಿನ್ನೆಲೆಯಲ್ಲಿ. ಹೊಸ ನೀತಿಯು ಸಣ್ಣ ಮತ್ತು ಗೃಹಕೈಗಾರಿಕೆಗಳಿಗೆ ೮೩೬ ಐಟಂಗಳನ್ನು ಮೀಸಲಾಗಿರಿಸಿದ್ದು, ಸಣ್ಣ ಕೈಗಾರಿಕೆಗಳ ಹೂಡಿಕೆ ಮಿತಿಯನ್ನು ಮೂವತ್ತು ಲಕ್ಷದಿಂದ ಅರವತ್ತು ಲಕ್ಷಕ್ಕೆ ಏರಿಸಿದ್ದು, ಅಭಿವೃದ್ಧಿ ಹೊಂದದ ಪ್ರದೇಶ ಗಳಲ್ಲಿ ರೂ ೭೫ ಕೋಟಿಯವರೆಗಿನ ಬಂಡವಾಳ ಹೂಡಿಕೆಗೆ ಕೈಗಾರಿಕಾ ಲೈಸನ್ಸ್ ಅಗತ್ಯವಿಲ್ಲವೆಂದಿರುವುದು – ಅಭಿವೃದ್ಧಿಯ ದೃಷ್ಟಿಯಿಂದ ಅತ್ಯಂತ ಉಪಯುಕ್ತ ಕ್ರಮಗಳು. ಶೇ. ೪೦ ರವರೆಗಿನ ವಿದೇಶೀ ತಂತ್ರಜ್ಞಾನ ಮತ್ತು ಬಂಡವಾಳ ಬಳಕೆಗೆ ಅನುಮತಿಯು ಅನಗತ್ಯ ಎಂದು ಸಾರಿರುವುದು ದೇಶದ ಸಮಸ್ಯೆಗಳನ್ನು ಹೆಚ್ಚಿಸುವುದು ಖಂಡಿತ.

ಭಾರತ ಅಭಿವೃದ್ಧಿಯ ಐದು ಹಂತಗಳಲ್ಲಿ ಈಗ ಮೂರನೆಯದನ್ನು ಮುಗಿಸಿ ನಾಲ್ಕನೆಯದನ್ನು ಪ್ರವೇಶಿಸುತ್ತಲಿದೆ. ಇನ್ನೂ ವಿದೇಶೀ ತಂತ್ರಜ್ಞಾನದ ಅವಲಂಬನೆ ಖಂಡಿತಾ ಸಾಧುವಲ್ಲ. ಆರಂಭದಲ್ಲಿ (೧೯೫೬ರಲ್ಲಿ) ವಿದೇಶೀ ತಂತ್ರಜ್ಞಾನದ ಸರಿ

ಯಾದ ತಿಳುವಳಿಕೆ ಭಾರತೀಯರಿಗೆ ಆಗುವ ದೃಷ್ಟಿಯಿಂದ ವಿದೇಶೀ ತಂತ್ರಜ್ಞಾನದ ಆಮದು ಸ್ವಾಗತಾರ್ಹವಾಗಿತ್ತು. ಈಗಲೂ ನಾವು ವಿದೇಶೀ ತಂತ್ರಜ್ಞಾನವನ್ನೇ ಅವಲಂಬಿಸಿದರೆ ನಮ್ಮದೇ ಆದ ತಂತ್ರಜ್ಞಾನವೊಂದು ರೂಪುಗೊಳ್ಳುವುದಿಲ್ಲ. ರೂಪುಗೊಂಡರೂ ವಿಕಸಿಸುವುದಿಲ್ಲ. ವಿದೇಶದ್ದು ಎಲ್ಲವೂ ಒಳ್ಳೆಯದು ಎನ್ನುವುದು ರಾಜಕೀಯ ಸಂದರ್ಭಸಾಧಕತನ.

ಇಂತಹ ವಿದೇಶೀ ಕಂಪನಿಗಳು ಉದ್ಯಮದ ಧೋರಣೆಯನ್ನು ನಿರ್ಧರಿಸುವ ಪೂರ್ಣ ಹಕ್ಕನ್ನು ತಮ್ಮಲ್ಲಿಯೇ ಉಳಿಸಿಕೊಂಡಿರುವುದರಿಂದ ಭಾರತೀಯರಿಗೆ ಅವುಗಳ ಆಗು ಹೋಗುಗಳನ್ನು ನಿರ್ಣಯಿಸುವ ಅವಕಾಶವಿಲ್ಲ. ವಿದೇಶೀ ತಂತ್ರಜ್ಞಾನ ದಿಂದಾಗಿ ದೇಶೀಯವಾಗಿ ಉದ್ಯೋಗವೂ ನಿರ್ಮಾಣವಾಗುವುದಿಲ್ಲ. ದೇಶೀಯ ಉದ್ದಿಮೆಗಳು ವಿದೇಶೀ ಕಂಪೆನಿಗಳ ಪೈಪೋಟಿಯನ್ನು ಎದುರಿಸಲು ಅಸಮರ್ಥವಾಗಿ ಇಡೀ ಉದ್ಯಮವಲಯ ನಿಧಾನವಾಗಿ ವಿದೇಶೀಯರ ಪಾಲಾಗುತ್ತದೆ.

ಹೊಸ ಕೈಗಾರಿಕಾ ನೀತಿಯಿಂದ ಸ್ಪಷ್ಟವಾಗುವ ವಿಷಯಗಳು ಹಲವು

1. ಸಮಾಜವಾದೀ ಸಮಾಜದ ಸ್ವರೂಪ ಪೂರ್ಣ ನಾಶಗೊಂಡಿರುವುದು.
2. ದೇಶೀಯವಾಗಿ ಭಾರತ ಕೈಗಾರಿಕೆಗಳಲ್ಲಿ ಬಲಾಢ್ಯವಾಗುವ ಅವಕಾಶವಿಲ್ಲ ದಿರುವುದು.
3. ವಿದೇಶೀ ತಂತ್ರಜ್ಞಾನ ಮತ್ತು ಬಂಡವಾಳ ಯಾವ ಕ್ಷೇತ್ರಗಳಿಗೆ ಸೀಮಿತ ವಾಗಿರಬೇಕು ಎಂಬ ಗಡಿ ನಿಗದಿಯಾಗದಿರುವುದು.
4. ವ್ಯಾಪಾರಶಿಲ್ಕು ಸರಿದೂಗಿಸಲು ಯಾವುದು ಸಮರ್ಪಕ ಎನ್ನುವುದರ ಬಗ್ಗೆ ಸರಕಾರಕ್ಕೆ ಸರಿಯಾದ ಸೈದ್ಧಾಂತಿಕ ನಿಲುವು ಇಲ್ಲದಿರುವುದು.

ಕೈಗಾರಿಕಾ ಮಂತ್ರಿ ಅಜಿತ್‌ಸಿಂಗರಿಗೆ ಇರುವುದು ಸಮಾಜವಾದಿ ಹಿನ್ನೆಲೆಯಲ್ಲ; ಅಮೆರಿಕನ್ ಹಿನ್ನೆಲೆ. ಅಮೇರಿಕಾದಲ್ಲಿ ಕೈಗಾರಿಕೆಗಳಿಗೆ ಮುಕ್ತ ವಾತಾವರಣ ಇದೆ. ರಶಿಯಾ ಮತ್ತು ಪೂರ್ವ ಯುರೋಪಿನ ಸಮಾಜವಾದಿ ರಾಷ್ಟ್ರಗಳಲ್ಲಿ ಮುಕ್ತತೆಯ ಗಾಳಿ ಬೀಸಿದೆ. ಭಾರತದ ನೂತನ ಔದ್ಯಮಿಕ ನೀತಿ ಪ್ರಪಂಚದ ಬಿಟ್ಟು ಸಂದರ್ಭಕ್ಕೆ ತಕ್ಕುದಾಗಿಯೇ ಇದೆ ಎಂದು ಹೊರನೋಟಕ್ಕೆ ಕಾಣಿಸುತ್ತದೆ. ಆದರೆ ಒಳಹೊಕ್ಕು ನೋಡಿದಾಗ ನಮಗೆ ಬೇರೆಯೇ ಚಿತ್ರಣ ದೊರೆಯುತ್ತದೆ.

ದೇಶ ಸುಮಾರು ಎರಡೂವರೆ ಲಕ್ಷ ಕೋಟಿಗಳಷ್ಟು ಸಾಲದಲ್ಲಿ ಮುಳುಗಿದೆ. ದೇಶದ ವ್ಯಾಪಾರಶಿಲ್ಕು ಸುಮಾರು ಎಪ್ಪತ್ತೈದು ದಶಲಕ್ಷಗಳಷ್ಟು. ರಫ್ತು ಹೆಚ್ಚಳ ದಿಂದ ಇದನ್ನು ಸರಿಪಡಿಸಬಹುದು. ರಫ್ತು ಹೆಚ್ಚಳಕ್ಕೆ ಸರಕುಗಳ ಗುಣಮಟ್ಟ ವೃದ್ಧಿಯಾಗಬೇಕು. ಅದಕ್ಕಾಗಿ ವಿದೇಶೀ ತಂತ್ರಜ್ಞಾನದ ಬಳಕೆ. ಪ್ರಧಾನಿಯ ಸಲಹಾಗಾರ ಅಹ್ಲುವಾಲಿಯಾ ಮಂಡಿಸಿದ ಸೂತ್ರದಂತೆ ಇನ್ನು ಐದು ವರ್ಷಗಳಲ್ಲಿ

ರೂಪಾಯಿಯನ್ನು ಶೇ ೨೦ ರಷ್ಟು ಅಪಮೌಲ್ಯಗೊಳಿಸಲಾಗುತ್ತದೆ. ಇದರಿಂದ ರಫ್ತು ಅಗ್ಗವಾಗುತ್ತದೆ ಮತ್ತು ರಫ್ತು ಹೆಚ್ಚಳ ಸುಲಭಸಾಧ್ಯವಾಗುತ್ತದೆ ಎನ್ನುವುದು ಸರಕಾರದ ಅಭಿಪ್ರಾಯ.

ಆದರೆ ಹೊಸ ಉದ್ಯಮ ನೀತಿ ಮುಂಬರುವ ವರ್ಷಗಳಲ್ಲಿ ದೇಶಕ್ಕೆ ಅಪಾರ ಹಾನಿಯನ್ನುಂಟುಮಾಡಲಿದೆ. ಏಕೆಂದರೆ ಅದಕ್ಕೆ ವಿಶ್ವ ಹಣಕಾಸು ನಿಧಿ ಮತ್ತು ವಿಶ್ವ ಬ್ಯಾಂಕಿನ ಮಾರ್ಗದರ್ಶಿ ಸೂತ್ರಗಳು ಆಧಾರವಾಗಿವೆ. ಇಂದು ಬ್ರೆಜಿಲ್, ಚಿಲಿ ಮತ್ತು ಅರ್ಜಂಟೈನಾ ದಂತಹ ರಾಷ್ಟ್ರಗಳು ಭೀಕರ ಆರ್ಥಿಕ ಸಂಕಷ್ಟಕ್ಕೆ ತುತ್ತಾಗಿರಲು ಇವೆರಡು ಸಂಸ್ಥೆಗಳ ಸೂತ್ರಗಳನ್ನು ಅನ್ವಯಿಸಿದುದೇ ಕಾರಣ. ಭಾರತಕ್ಕೂ ಅದೇ ಗತಿ ಕಾದಿದೆ.

ಉದಾರವಾದ ಎಂದರೆ ವಿದೇಶೀ ತಂತ್ರಜ್ಞಾನಕ್ಕೆ ಮುಕ್ತ ಅವಕಾಶ ಎಂಬ ನಿಲುವು ತಪ್ಪು. 'ದೇಶೀಯ ಪ್ರತಿಭೆಗಳಿಗೆ ಉತ್ತೇಜನ' ಎಂದು ಅದು ಬದಲಾಗ ಬೇಕಾಗಿದೆ. ರಕ್ಷಣಾ ಕ್ಷೇತ್ರ ಹೊರತುಪಡಿಸಿ ಉಳಿದೆಲ್ಲಾ ಕ್ಷೇತ್ರಗಳಲ್ಲಿ ಖಾಸಗಿ ಮತ್ತು ಸಂಯುಕ್ತ ರಂಗಗಳಿಗೆ ವಿಪುಲಾವಕಾಶ ಲಭ್ಯವಾಗಬೇಕು ಆದರೆ ವಿದೇಶೀ ತಂತ್ರಜ್ಞಾನಕ್ಕಲ್ಲ, ಬಂಡವಾಳಕ್ಕೂ ಅಲ್ಲ. ಹೆಜ್ಜೆ ಹೆಜ್ಜೆಗೂ ಕಟ್ಟು ನಿಟ್ಟಿನ ನಿಯಂತ್ರಣ ಖಂಡಿತಾ ಅಗತ್ಯವಿಲ್ಲ. ಪ್ರಸ್ತುತ ನೀತಿ ದೇಶೀಯ ತಂತ್ರಜ್ಞಾನಕ್ಕೆ ಮಾತ್ರ ನಿಯಂತ್ರಣ ವಿಧಿಸುವ ಹಾಗೆ ಕಾಣುತ್ತಿದೆ. ಯಾವುದೇ ಆರ್ಥಿಕ ನೀತಿಗೆ 'ಅಭಿವೃದ್ಧಿ' ಅಡಿಗಲ್ಲಾಗಬೇಕು. ಅಭಿವೃದ್ಧಿ ಅಂದರೆ ಭೌತಿಕ ಸಂಪತ್ತಿನ ಹೆಚ್ಚಳ ಮಾತ್ರವಲ್ಲ, ನ್ಯಾಯ ಬದ್ಧವಾದ ವಿತರಣೆ ಕೂಡಾ. ಈಗಿನ ನೀತಿಯಿಂದ ಈ ಅರ್ಥದ ಅಭಿವೃದ್ಧಿ ಅಸಾಧ್ಯ.

ದೇಶೀಯ ತಂತ್ರಜ್ಞಾನ, ಉದ್ಯೋಗಾವಕಾಶಗಳ ವಿಪುಲ ಸೃಷ್ಟಿ, ವಿಕೇಂದ್ರೀಕೃತ ಸಣ್ಣ ಉದ್ದಿಮೆಗಳು, ಬದಲಿ ಚೈತನ್ಯ ಮೂಲಗಳ ಶೋಧನೆ, ಆಮದು ಪರ್ಯಾಯ ಸರಕುಗಳ ಉತ್ಪಾದನೆ – ಇವನ್ನು ಆಧಾರವಾಗಿರಿಸಿಕೊಂಡು ನಮ್ಮ ಉದ್ಯಮ ನೀತಿ ರೂಪುಗೊಳ್ಳಬೇಕಾಗಿದೆಯೇ ಹೊರತು ಅಮೇರಿಕಾ ಮತ್ತಿತರ ಬಂಡವಾಳಶಾಹೀ ರಾಷ್ಟ್ರಗಳನ್ನು ಸಂಪ್ರೀತಿಗೊಳಿಸಲು ಅಲ್ಲ.

ನನ್ನ ಧ್ಯೇಯ ಸ್ವಾತಂತ್ರ್ಯಕ್ಕಿಂತ ಎಷ್ಟೋ ಹಿರಿದು. ಭಾರತದ ವಿಮೋಚನೆಯ ಮೂಲಕ ಪಶ್ಚಿಮದ ಶೋಷಣೆಯ ತುಳಿತಕ್ಕೆ ಸಿಕ್ಕಿರುವ ಜಗತ್ತಿನ ಅಶಕ್ತ ಜನಾಂಗಗಳ ವಿಮೋಚನೆಗೂ ನಾನು ಶ್ರಮಿಸುತ್ತೇನೆ.

– ಮಹಾತ್ಮ ಗಾಂಧೀ

'ಆತ್ಮೀಯ ಶತ್ರು' ವನ್ನು ಓದಿ

(Intimate Enemy–ಲೇಖಕ : ಅಶೀಶ್ ನಂದಿ)

–ಎಸ್. ನಾರಾಯಣನ್

(ಅಶೀಶ್ ನಂದಿ ಭಾರತದ ಪ್ರಖ್ಯಾತ ಸಾಮಾಜಿಕ ಮನಶ್ಶಾಸ್ತ್ರಜ್ಞ. ವಸಾಹತು ಶಾಹಿ ಸ್ಥಿತಿಯ ಬಗ್ಗೆ ವಿಶಿಷ್ಟ ಒಳನೋಟಗಳನ್ನು ನಂದಿ ತಮ್ಮ ಹಲವು ಪುಸ್ತಕಗಳಲ್ಲಿ ನೀಡಿದ್ದಾರೆ.

ಎಸ್. ನಾರಾಯಣನ್ ದೊಡ್ಡಬಳ್ಳಾಪುರದ ಶ್ರೀ ಕೊಂಗಾಡಿಯಪ್ಪ ಕಾಲೇಜಿನಲ್ಲಿ ಇಂಗ್ಲಿಷ್ ಉಪನ್ಯಾಸಕರಾಗಿದ್ದಾರೆ. ಗಾಂಧಿ ಮತ್ತು ಪರ್ಯಾಯ ಚಿಂತನೆಯ ಬಗ್ಗೆ ಪ್ರೌಢಿಮೆಯುಳ್ಳ ಚಿಂತಕ. ಅವರ ಇಂಗ್ಲಿಷ್ ಲೇಖನದ ಅನುವಾದ - ಸಂ.)

ಅಶೀಶ್ ನಂದಿಯವರ ಮುಖ್ಯ ವಾದವನ್ನು ಅವರ ಪುಸ್ತಕದ ಕೊನೆಯ ಭಾಗದಿಂದ ಸಂಕ್ಷೇಪಿಸಬಹುದು. ಅವರು ಹೀಗೆ ಬರೆಯುತ್ತಾರೆ. "೧೫ ನೇ ಶತಮಾನದ ಅಜ್ಟೆಕ್ ಪುರೋಹಿತರ ಬಗ್ಗೆ ಇವಾನ್ ಇಲ್ಲಿಚ್ ಒಂದು ಘಟನೆಯನ್ನು ಹೇಳಿದ್ದರು. ಸ್ಪಾನಿಶ್ ಆಕ್ರಮಣಕಾರರು ಈ ಪುರೋಹಿತರನ್ನು ಬಂಧಿಸಿ ಮಂತ್ರವಾದಿಗಳೆಂದು ಸೆರೆಗೆ ತಳ್ಳಿದಾಗ, ತಮ್ಮ ದೇವರು ಸತ್ತಿದ್ದಾದರೆ ತಾವೂ ಸಾಯಲು ಸಿದ್ಧ ಎಂದು ಅವರು ಹೇಳಿದರು. ಈ ಅಂತಿಮ ಪ್ರತಿರೋಧದ ಬಳಿಕ ಅವರನ್ನು ಸಾಯಿಸಲಾಯಿತು. ಇದೇ ಸಂದರ್ಭದಲ್ಲಿ ಭಾರತದ ಬ್ರಾಹ್ಮಣ ಪುರೋಹಿತರು ಪ್ರಾಯಶಃ ಸಾರಾ ಸಗಟು ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಳ್ಳುತ್ತಿದ್ದರು. ವಿದೇಶೀ ದೊರೆಗಳು, ಅವರ ದೇವರುಗಳ ಬಗ್ಗೆ ಸ್ತುತಿ ಕಾವ್ಯಗಳನ್ನೂ ಕೆಲವರು ಬರೆಯುತ್ತಿದ್ದರೋ ಏನೋ. ಆದರೆ ಅವರೆಲ್ಲ ಆದರ್ಶ ಕ್ರಿಶ್ಚಿಯನ್ನರಾಗುತ್ತಿದ್ದರೆಂದಲ್ಲ. ಅವರ ಕ್ರಿಶ್ಚಿಯನ್ ಜೀವನವೂ ಹಿಂದೂ ಧರ್ಮದ ಒಂದು ಶಾಖೆಯಂತೆ ತೋರುತ್ತಿತ್ತೋ ಏನೋ. ಆದರೆ ಸಾಂದರ್ಭಿಕ ಒತ್ತಡ ಮತ್ತು 'ಆಪದ್ಧರ್ಮ'ದ ಕಾರಣದಿಂದ ವಿದೇಶೀ ಧರ್ಮ, ದೊರೆಗಳೆದುರು ತಲೆಬಾಗಿ ಬದುಕುವುದು ಅವರ ಮಟ್ಟಿಗೆ ಸಹಜವೇ.

ಇಂದು ಪಾಶ್ಚಾತ್ಯೀ ಕರಣವೆಂದು ನಮಗೆ ಕಾಣಿಸುವುದು ನಿಜಕ್ಕೂ ಪಶ್ಚಿಮವನ್ನು ನಮ್ಮ ನೆಲದ ನಿಜಕ್ಕೆ ಪಳಗಿಸುವ ರೀತಿ ಅಷ್ಟೇ. ಹಿಂದೂ ಪುರಾಣಗಳಲ್ಲಿ

ಪದೇ ಪದೇ ಹೊಮ್ಮುವ ಧ್ವನಿ ಎಂದರೆ – ನೇರ, ಕುರುಡು ಧೈರ್ಯ ವ್ಯಕ್ತಿಗತ ಹುತಾತ್ಮತೆಗೆ ಸರಿಯಿರಬಹುದು. ಆದರೆ ಸಮಷ್ಟಿಯ ಉಳಿವಿಗೆ ಇದು ಸಮಂಜಸ ವೆಂದೇನೂ ಅಲ್ಲ.

ಸಾಮಾನ್ಯ ಭಾರತೀಯನೊಬ್ಬ ದೀರ್ಘ ಕಾಲದ ಸಂಕಷ್ಟ ಅನುಭವಿಸುವ ಆತಂಕದ ಜೊತೆಗೇ, ತನ್ನ ಆಳದ ನಂಬಿಕೆಯ ಬೇರುಗಳನ್ನು ಉಳಿಸುವ ಹೊಣೆ ಹೊತ್ತಿರುತ್ತಾನೆ. ಇದನ್ನಾತ ಅಶಕ್ತನ ಋಣಾತ್ಮಕ ಪ್ರತಿಕ್ರಿಯೆಯಿಂದ ಸಾಧಿಸ ಲೆತ್ನಿಸುತ್ತಾನೆ. ತನ್ನ ಉಳಿವಿಗಾಗಿ ತನ್ನ ಸ್ವಂತಿಕೆ ಮತ್ತು ಆತ್ಮಗೌರವವನ್ನು ವಿಶೇಷ ಬಹಿರಂಗ ಗೊಳಿಸದೇ, ತನ್ನ ಮೇಲೆ ಒದಗಿ ಬಂದಿರುವ ಬಾಹ್ಯ ಒತ್ತಡ ವನ್ನು ನಿಭಾಯಿಸಲೆತ್ನಿಸುತ್ತಾನೆ.

ಈ ನೆಲೆಯ ಅತ್ಯುತ್ತಮ ಹಂತದಲ್ಲಿ ಆತ ಸತ್ಯಾಗ್ರಹಿಯಾಗಿರುತ್ತಾನೆ. (ಇದನ್ನು ಲೆನಾಯ್ "ಪರಿಪೂರ್ಣ ಅಶಕ್ತತೆ" ಎಂದು ಕರೆಯುತ್ತಾನೆ) ಇದರ ಸಾಮಾನ್ಯತೆಯಲ್ಲಿ ಆತ ಜೀವ ಉಳಿಸಿಕೊಳ್ಳಲು ದಾರಿ ಹುಡುಕುವವನಾಗಿರುತ್ತಾನೆ. ಇಲ್ಲೂ ಅಷ್ಟೇ. ಮೇಲ್ನೋಟಕ್ಕೆ ರಾಜಿ ಮಾಡಿಕೊಂಡಂತೆ ಕಂಡರೂ, ಆತ ಮಾನಸಿಕವಾಗಿ ಪಳಗಿಸಲ್ಪಡಲು ಒಪ್ಪುವುದಿಲ್ಲ.

ಮಾನಸಿಕವಾಗಿ, ಸಾಂಸ್ಕೃತಿಕವಾಗಿ ಅಪಾಯಕ್ಕೀಡಾದಾಗ, ಭಾರತೀಯ ನೊಬ್ಬ, ತನ್ನ ಶೋಷಕನ ಸಾಧನ, ತಂತ್ರಗಳಿಂದಲೇ ಆತನನ್ನು ಎದುರಿಸಲೆತ್ನಿಸು ತ್ತಾನೆ. ಭಿನ್ನಮತ ತೋರಬೇಕೆಂದಾಗಲೂ ಪಾಶ್ಚಿಮಾತ್ಯ ರೀತಿಯ ಭಿನ್ನಮತ ಪ್ರದರ್ಶಿಸದೇ, ತನ್ನದೇ ಆದ ವಿಶಿಷ್ಟ ದಾರಿ ಬಳಸುತ್ತಾನೆ. ಪಶ್ಚಿಮದ ಉದಾರ ವಾದಿಗಳಿಗೂ, ಪಾಶ್ಚಾತ್ಯೀಕರಣದ ಪ್ರಭಾವಕ್ಕೊಳಗಾದ ಭಾರತೀಯ ಬುದ್ಧಿ ಜೀವಿಗಳಿಗೂ ಈ ದಾರಿ ವ್ಯರ್ಥವೆಂದು ಕಾಣಬಹುದು.

ನಂದಿ ತಮ್ಮ ಗ್ರಂಥದುದ್ದಕ್ಕೂ ಅಸ್ತಿತ್ವದ ಉಳಿವನ್ನು (Survival) ಮುಖ್ಯವಾಗಿಸುತ್ತಾರೆ. ಬದುಕುಳಿಯುವುದೆಂದರೆ ಮಾನಸಿಕವಾಗಿ ಶಿಥಿಲವಾಗಿಲ್ಲ ದಿರುವುದು ಎಂದೇ ಅರ್ಥ. ಇಲ್ಲವಾದರೆ ಕೇವಲ ದೈಹಿಕ ಉಳಿವಿಗೆ ಅರ್ಥವಿರುವು ದಿಲ್ಲ. ನಂದಿಯವರು ಹೇಳುವ ಪ್ರಕಾರ ಅಸ್ತಿತ್ವದಲ್ಲಿರುವುದೆಂದರೆ ತನ್ನ ಮೂಲ ಪ್ರಕೃತಿಯನ್ನು ಉಳಿಸಿಕೊಳ್ಳುವುದು.

ಭಾರತದ ಸಂಸ್ಕೃತಿ ಮತ್ತು ಜನ ಸಮುದಾಯದ ಮಟ್ಟಿಗೆ ಇದು ನಿಜವೇ ?

ಪಶ್ಚಿಮದ ವಸಾಹತುಶಾಹಿ ದಬ್ಬಾಳಿಕೆಗೆ ಭಾರತದ ಪ್ರತಿಕ್ರಿಯೆ ಕೇವಲ ತಂತ್ರಗಾರಿಕೆಯ ಉಪಾಯವೆಂದು ನಂದಿ ಭಾವಿಸುವುದಿಲ್ಲ. ಬದಲು ಪಶ್ಚಿಮದ ಸಂಸ್ಕೃತಿ ತನ್ನ 'ನಿಜ' ಪ್ರಕೃತಿಯನ್ನು ಮರೆತಿದೆ; ತನ್ನ ಸಹಜ ವ್ಯಕ್ತಿತ್ವದ ಜತೆ ಸ್ಪರ್ಶ ಕಳಕೊಂಡಿದೆ ಎಂಬುವನ್ನು ಪಶ್ಚಿಮಕ್ಕೆ ತೋರಿಸಿಕೊಡುವ ನೈತಿಕ ಭಂಗಿಯಾಗಿ ಭಾರತದ ಪ್ರತಿಕ್ರಿಯೆ ಮೂಡಿಬರುತ್ತದೆ. ದಬ್ಬಾಳಿಕೆ, ತೋಳ್ಬಲ, ಕ್ರೌರ್ಯ,

ತಾಂತ್ರಿಕ ಪ್ರಗತಿಯ ದಾರಿ ಹಿಡಿದಿರುವ ಪಶ್ಚಿಮಕ್ಕೆ ನೈತಿಕ ದಾರಿ ತೋರುವ ಹೆಜ್ಜೆ ಇದು; ಆದ್ದರಿಂದಲೇ ಭಾರತೀಯ ಸುಸ್ಕೃತಿ ತನ್ನ ಉಳಿವಿಗಾಗಿಯಷ್ಟೇ ಈ ಮಾರ್ಗೋಪಾಯ ಹಿಡಿದು ಹೋರಾಡುತ್ತಿಲ್ಲ, ಅಸ್ತವ್ಯಸ್ತಗೊಂಡಿರುವ ಪ್ರಪಂಚ ವನ್ನು ಸರಿಪಡಿಸಲು ಹೋರಾಡುತ್ತಿದೆ ಎಂದು ನಂದಿ ಭಾವಿಸುತ್ತಾರೆ.

ಸ್ವಲ್ಪ ಮಟ್ಟಿಗೆ ಇದು ನಿಜ. ಇಂದು ಬಹಳಷ್ಟು ಮಂದಿ ಮಾಡುತ್ತಿರುವ ಧೋರಣೆಯ ತಪ್ಪೆಂದರೆ, ಭಾರತ ಪಾರಭೌತಿಕವನ್ನು. ಪಶ್ಚಿಮ ಲೌಕಿಕತೆಯನ್ನು ಪ್ರತಿನಿಧಿಸುತ್ತದೆ ಎಂದು ಭಾವಿಸುವುದು. ಅಶೀಶ್ ನಂದಿ ಈ ತಪ್ಪು ಮಾಡುವು ದಿಲ್ಲ. ತೀರಾ ಸರಳೀಕರಣವನ್ನು ಅವರ ಪರಾಮರ್ಶೆ ಮಾಡುವುದೇ ಇಲ್ಲ.
ಈ ಹಿನ್ನೆಲೆಯಲ್ಲಿ ಕೆಲವು ಪ್ರಶ್ನೆಗಳನ್ನು ಮುಂದಿಡಬಯಸುವೆ.

೧. ಅಶೀಶ್ ನಂದಿ ತನ್ನ ವಾದದಲ್ಲಿ, ಗಾಂಧಿಯನ್ನು ಮಾದರಿ ಭಾರತೀಯನೆಂದು ಭಾವಿಸುತ್ತಾರೆ. ಗಾಂಧಿ ನಿಜಕ್ಕೂ ಮಾದರಿ ಭಾರತೀಯನೇ? ವಸಾಹತುಶಾಹಿಗೆ ಪ್ರತಿಕ್ರಿಯಿಸುವ ಭಾರತೀಯರ, ಸಂಕಟ, ಪೌಲ್ಯ ಮತ್ತು ಮಾನಸಿಕ ಸ್ಥಿತಿಯನ್ನು ಗಾಂಧಿ ಪ್ರತಿನಿಧಿಸುತ್ತಾರೆಂದು ಪರಿಗಣಿಸುವುದು ತಪ್ಪೆಂದು ನನ್ನ ಗ್ರಹಿಕೆ. ಗಾಂಧಿಯನ್ನು ನಮ್ಮ ಸಂದರ್ಭದ ಅಪರೂಪದ ವ್ಯಕ್ತಿಯಾಗಿ ಪರಿಗಣಿಸುವುದು ಹೆಚ್ಚು ಸರಿಯೇನೋ. ಗಾಂಧಿಯ ಕೃತಿಗಳನ್ನು ಓದಿದಾಗ ಎಲ್ಲ ಭಾರತೀಯರ ಮನಸ್ಸಲ್ಲೂ ಕಸಿವಿಸಿ ಉಂಟಾಗಿದೆ; ಉಂಟಾಗುತ್ತಿದೆ. ಆರ್ವೆಲ್‌ಗೆ ಗಾಂಧಿ ಕುರಿತು ಇದ್ದ ಅಪನಂಬುಗೆ ಭಾರತದ ಲಕ್ಷಾಂತರ ಮಂದಿಗೂ ಇರಬಹು ದಾದ್ದೇ. ಆದರೂ ಗಾಂಧಿ ನಮಗೆ ಮಹಾತ್ಮಾ!

ಈ ಸಮಸ್ಯೆಯನ್ನು ನಾನು ಹೀಗೆ ನೋಡಬಯಸುವೆ. ನಮ್ಮ ಸಮಾಜ ದಲ್ಲಿದ್ದ ಕೆಲವು ಸಾಂಸ್ಕೃತಿಕ ನಿಗೂಢ ಅರ್ಥಗಳನ್ನು ಗಾಂಧಿ ಬಳಸಿಕೊಂಡರು. ನಮ್ಮಲ್ಲಿ ರೂಢಮೂಲವಾಗಿರುವ ಲೌಕಿಕತೆ, ಪಾರ ಲೌಕಿಕತೆ; ದುರಾಸೆ, ತ್ಯಾಗ; ದೇಹದ ಬಗ್ಗೆ ಮಮತೆ, ಆತ್ಮದ ಬಗ್ಗೆಯ ಕಾಳಜಿಯಿಂದಾಗಿ ಒಂದು ರೀತಿಯ ಸಾಂಸ್ಕೃತಿಕ ಅನಾರೋಗ್ಯ ಎಂದಿನಿಂದಲೂ ಇತ್ತು. ಗಾಂಧಿ ಇದನ್ನು ಸ್ವಲ್ಪ ಕಾಲ ತೊಡೆದು ಹಾಕಿದರು. ನಾವು ಸದಾ ಮಾತಲ್ಲಿ ಉರುಳಿಸುತ್ತಿದ್ದವುಗಳನ್ನು ಗಾಂಧಿ ಆಚರಣೆಯಲ್ಲಿ ಒತ್ತಿ ಹೇಳಿದರು. ಧರ್ಮ, ಅಹಿಂಸೆ, ಸತ್ಯಕ್ಕಾಗಿ ಹುಡುಕಾಟ ಇತ್ಯಾದಿ.

ತ್ಯಾಗಶೀಲತೆ, ಇಂದ್ರಿಯ ನಿಗ್ರಹ. ಸರಳ ಜೀವನಗಳನ್ನು ಆಚರಿಸುತ್ತಿದ್ದ ಮಂದಿಯ ಬಗ್ಗೆ ನಮ್ಮ ಜನರಿಗಿದ್ದ ಭಯ ಗೌರವಗಳನ್ನು ಗಾಂಧಿ ಬಳಸಿಕೊಂಡರು. ಕನಿಷ್ಠ ಮೂವತ್ತುವರ್ಷ ಈ ವ್ಯಕ್ತಿ ದೇಶದ ಮೇಲೆ ಪೂರ್ಣ ಹತೋಟಿ ಪಡೆ ದಿದ್ದರು. ಈ ದೇಶಕ್ಕೆ ಬ್ರಿಟಿಷ್ ವಸಾಹತುಶಾಹಿಯಷ್ಟೇ ಕಸಿವಿಸಿಯನ್ನು ಗಾಂಧಿಯೂ ಉಂಟು ಮಾಡಿದ್ದಿರಬಹುದು! ಗಾಂಧಿ ಸತ್ತಾಗ ದೇಶ ಅತ್ತಿತು, ನಿಜ; ಆದರೆ ಅಷ್ಟೇ ನಿರಾಳವಾಗಿರಬಹುದು!

ಗಾಂಧಿ ನಿಜಕ್ಕೂ ಹಿಂದೂ ಸಮಾಜವನ್ನು ಪುನರ‍್ರಚಿಸುವಲ್ಲಿ ಯಶಸ್ವಿಯಾದರೇ? ಎಂಬ ಪ್ರಶ್ನೆಗಾಗಿ ಈ ವಾದವನ್ನು ಮುಂದಿಡುತ್ತಿದ್ದೇನೆ. ಬ್ರಿಟಿಷರ ವಿರುದ್ಧ ಗಾಂಧಿ ಯಶಸ್ವಿಯಾದರು, ಆದರೆ ಜಾತಿ ವ್ಯವಸ್ಥೆಯು ಬಿಗಿಯಿದ್ದ ಈ ಸಮಾಜದಲ್ಲೇನಾದರೂ ಬದಲಾವಣೆಯಾಯಿತೇ? ಗಾಂಧೀಯ ಹೋರಾಟವನ್ನು ಇದೇ ದೇಶದ ಶೋಷಕ – ಶೋಷಿತರ ಸಂದರ್ಭದಲ್ಲಿಟ್ಟಾಗ ಏನೆನ್ನಿಸುತ್ತದೆ ?

ಜಾಗತಿಕವಾಗೇ ವಸಾಹತುಶಾಹಿ ದಬ್ಬಾಳಿಕೆಗಾರ – ದಬ್ಬಾಳಿಕೆಗೊಳಗಾದವನು ಎಂಬ ಸ್ಥೂಲ ಸಂಬಂಧವನ್ನು ಕಾಣಬಹುದು ಎಂದು ಅಶೀಶ್ ನಂದಿ ವಾದಿಸುತ್ತಾ ಈ ಅರ್ಥದಲ್ಲಿ ಭಾರತದ ವಸಾಹತು ಶಾಹಿ ಹೋರಾಟ ನೈತಿಕ ಹೋರಾಟ ಎಂಬಂತೆ ತಾತ್ವಿಕ ವಾದವೊಂದನ್ನು ಮುಂದಿಡುತ್ತಾರೆ. ಹಾಗಿದ್ದರೆ ಈ ದೇಶದ ಒಳಗಿನ ಶೋಷಕ – ಶೋಷಿತರ ಸಂಬಂಧದಲ್ಲಿ ಇದು ಯಾವ ಆಯಾಮವನ್ನು ಪಡೆಯುತ್ತದೆ?

೨. ಕಳೆದ ನಾಲ್ಕುನೂರು ವರ್ಷಗಳಲ್ಲಿ ಪಶ್ಚಿಮದಲ್ಲಿ ಉಂಟಾದ ಎಲ್ಲಾ ಬೆಳವಣಿಗೆಗಳನ್ನು ವಸಾಹತು ಶಾಹಿಯು ಬೆಳವಣಿಗೆಯ ಸಾಧನಗಳು ಎಂದು ಆಶೀಶ್ ನಂದಿ ಗುರುತಿಸುತ್ತಾರೆ. ಬಂಡವಾಳಶಾಹಿ ಪದ್ಧತಿ, ಕೈಗಾರಿಕೆ, ವಿಜ್ಞಾನ, ತಂತ್ರಜ್ಞಾನ ಇವೆಲ್ಲವೂ ಶೋಷಣೆ, ದಬ್ಬಾಳಿಕೆ ಮತ್ತು ಲೂಟಿಯ ಸಾಧನಗಳೆಂದು ನಂದಿ ಪರಿಗಣಿಸುತ್ತಾರೆ. ಇವೆಲ್ಲವೂ ಪುರುಷ ಪ್ರಧಾನ ಧೋರಣೆಗಳೇ. ಇಂಗ್ಲೆಂಡಿನ ಮಟ್ಟಿಗೆ ಇವು ಕಾಕತಾಳೀಯವಾಗಿ ನಿಜ. ಆದರೆ ಇದೇ ವಿಜ್ಞಾನ ತಂತ್ರಜ್ಞಾನಗಳನ್ನು ಬಳಸಿರುವ ಸಮಾಜವಾದಿ ರಾಷ್ಟ್ರಗಳಲ್ಲಿ ಇವು ಶೋಷಣೆ, ದಬ್ಬಾಳಿಕೆ, ಲೂಟಿಗೆ ಸಹಾಯ ಮಾಡಿದ್ದಾವೆಯೇ ? ವಿಜ್ಞಾನ ತಂತ್ರಜ್ಞಾನಗಳು ಮೂಲತಃ ಶೋಷಕ ಅಸ್ತ್ರಗಳೆಂದು ಹೇಳಬಹುದೇ ?

೩. ಅಶೀಶ್ ನಂದಿ ಪ್ರಕಾರ ದಬ್ಬಾಳಿಕೆಗೆ ಒಳಗಾದವನು, ಶೋಷಕನಲ್ಲಿರುವ ಒಳ್ಳೆಯ ಅಂಶಗಳನ್ನು ಮೈಗೂಡಿಸಿಕೊಳ್ಳಲೆತ್ನಿಸುತ್ತಾನೆ. ನಮ್ಮದೇ ಅನುಭವದಲ್ಲಿ ಇಂಗ್ಲಿಷರಿಂದ ಕಲಿತುಕೊಂಡು ನಮ್ಮದಾಗಿಸಿಕೊಂಡಿರುವ ಮೂರು ಸಾಂಸ್ಥಿಕ ರಚನೆಗಳು ಇಂದು ಕುಸಿಯುತ್ತಿವೆ. ಪಾರ್ಲಿಮೆಂಟ್, ನ್ಯಾಯಾಂಗ, ಶಿಕ್ಷಣ ವ್ಯವಸ್ಥೆಗಳು – ಇಂದು ಶಿಥಿಲಗೊಳ್ಳುತ್ತಿವೆ. ಎರಡು ಸಂಸ್ಕೃತಿಗಳ ಮುಖಾಮುಖಿಯಲ್ಲಿ ಕೆಲವು ಸದ್ಗುಣಗಳಷ್ಟೇ ಕೊಡು ಕೊಳ್ಳಲ್ಪಡುತ್ತವೆ ಎಂದು ಭಾವಿಸಲು ಸಾಧ್ಯವೇ ?

ಈ ಅಂಶಗಳನ್ನು ಯಾಕೆ ಹೇಳಿದೆನೆಂದರೆ ಗಾಂಧಿಯನ್ನು ಭಾರತದ ಜೊತೆಗೆ ಸಮೀಕರಿಸಿ, ಇವೆರಡೂ – ಪುರುಷ ಗುಣ ಪ್ರಧಾನ, ಶೋಷಕ ಪಶ್ಚಿಮವನ್ನು ಯಶಸ್ವಿಯಾಗಿ ಎದುರಿಸಿದವು ಎಂಬುದು ಸರಿಯೇ ? ಮೇಲ್ಕಂಡ ಸಮೀಕರಣ ಅಪ್ರಾಯ ಮಾನವಾಗಲು ಕಾರಣಗಳನ್ನು ನಾನು ಬಲ್ಲೆ. ೨೦ ನೇ ಶತಮಾನದ ದೃಷ್ಟಿಯಿಂದ ಗಾಂಧಿ ಒಬ್ಬ ರ‍್ಯಾಡಿಕಲ್. ಆರೋಗ್ಯ ಮತ್ತು ಜನಕಲ್ಯಾಣಗಳ

ಪಶ್ಚಿಮದ ಕಲ್ಪನೆಗಳಿಗೆ ಗಾಂಧಿ ನಿಜಕ್ಕೂ ಪರ್ಯಾಯವನ್ನು ಒದಗಿಸುತ್ತಾರೆ. ಮಹಿಳಾವಾದಿ ಮತ್ತು ಪರಿಸರಪರವಾದ ದೃಷ್ಟಿಕೋನಗಳನ್ನು ಗಾಂಧಿಯಲ್ಲಿ ಹುಡುಕುವುದು ಸುಲಭ. ಆದರೆ ಇವೆರಡೂ ಗಾಂಧಿಯನ್ನು ಒಳಗೊಳ್ಳಲು ಸಾಧ್ಯ ವಿಲ್ಲ. ಅಷ್ಟೇ ಅಲ್ಲ, ಗಾಂಧಿಯ 'ಭಾರತ' ಭಾರತದ 'ಭಾರತ'ವೂ ಅಲ್ಲ, ಎಂದು ನೆನಪಿಡುವುದು ಒಳ್ಳೆಯದು. ಭಾರತದ ಸಂಸ್ಕೃತಿ ಮತ್ತು ಜನರ ಜೊತೆ ಗಾಂಧಿಯ ಸಂಬಂಧ ಅಸ್ಪಷ್ಟ ಸಂಕೀರ್ಣತೆಯನ್ನೊಳಗೊಂಡಿದೆ. ಅದ್ದರಿಂದಲೇ ಗಾಂಧಿಯನ್ನು ಭಾರತದ 'ಮೂಲದ್ರವ್ಯ'ದ ಜೊತೆ ಸಮೀಕರಿಸಿ, ಆ ಸಾಧನೆಯನ್ನು ಪಶ್ಚಿಮಕ್ಕೆ ನಮ್ಮ ಸವಾಲು ಎಂದು ಘೋಷಿಸುವುದೂ ಸರಿಯಲ್ಲ.

ನಮ್ಮ ಕಾಲದ ಜಗತ್ತಿಗೆ ಪರ್ಯಾಯವನ್ನು ಒದಗಿಸುವಲ್ಲಿ ಗಾಂಧಿ ಯಾವ ರೀತಿ ಮುಖ್ಯವಾಗುತ್ತಾರೆ ಎಂದು ನಾವೀಗ ಪರಿಶೀಲಿಸಬೇಕು. ನಿಜವಾದ ಪರ್ಯಾಯ ಅಭಿವೃದ್ಧಿ, ಆರೋಗ್ಯ ಮತ್ತು ರಾಜಕೀಯದ ಕಲ್ಪನೆಗಳು ಸದ್ಯದ ಪ್ರಭಾವೀ ಸಿದ್ಧಾಂತಗಳ ಹಿನ್ನೆಲೆಯಲ್ಲಿ ಯಾವ ಆಯಾಮವನ್ನು ಪಡೆಯುತ್ತವೆ ಎಂದು ನೋಡಬೇಕು. ಯಾಕೆಂದರೆ ನಮ್ಮಲ್ಲಿ ಈಗಿರುವ 'ಪರ್ಯಾಯ' ಕಲ್ಪನೆಗಳೂ ಪಶ್ಚಿಮದಲ್ಲೇ ಹುಟ್ಟಿರುವವು. ಎಷ್ಟೋ ಬಾರಿ ವಸಾಹತುಶಾಹಿ ದಬ್ಬಾಳಿಕೆಗೆ ಒಳಗಾದವರಿಂದ ಒಪ್ಪಿತವಾದವು ಕೂಡಾ.

ನಿಜವಾದ ಹೊರದಾರಿ – ನಮ್ಮ ಸಂದರ್ಭದ ಸಂಕೀರ್ಣತೆಯಲ್ಲಿ – ಹೇಗೆ ಸಾಧ್ಯ ಎಂಬ ಬಗ್ಗೆ, ನಮ್ಮ ಹಿತಾಸಕ್ತಿಗಳ ದೃಷ್ಟಿಯಿಂದಾದರೂ ನಾವು ಚರ್ಚೆಯನ್ನು ಆರಂಭಿಸಲೇಬೇಕು.

೯ ನೇ ಪುಟದಿಂದ .... ಗಾಂಧೀಯ ಯೋಜನೆಯೆಂದರೇನು ?

ಉದ್ಯೋಗ ಇವು ಗಾಂಧೀಯ ಪೂರ್ಣ ಸ್ವರಾಜ್ಯದ ಸಾಧನಗಳು. ಈ ದೇಶದ ಲಕ್ಷಾಂತರ ಹಳ್ಳಿಗಳ ಸಂಪನ್ನತೆಯೇ ಈ ದೇಶದ ಸಂಪನ್ನತೆ.

ನಮ್ಮ ವರ್ತಮಾನದ ಪ್ರಪಂಚವನ್ನು ಅವಲೋಕಿಸಿದರೆ ಒಂದೆಡೆ, ಬಂಡವಾಳ ಶಾಹಿ ವ್ಯವಸ್ಥೆ-ಯುದ್ಧ ಶಸ್ತ್ರಾಸ್ತ್ರ ಪೈಪೋಟಿಗಳಿಂದಾಗಿ ಎಡವುತ್ತಿದೆ. ಸಾಮ್ಯವಾದಿ ಆರ್ಥಿಕತೆ, ಜನರ ಬಂಡಾಯದಿಂದಾಗಿ ಕುಸಿಯುತ್ತಿದೆ. ಈ ಸಂದರ್ಭದಲ್ಲಿ ಶಾಂತಿ, ನ್ಯಾಯಗಳ ಮುಖೇನ ಅಹಿಂಸೆಯ ಕ್ರಿಯೆಯ ಗಾಂಧೀ ಮಾರ್ಗವೊಂದೇ ಉಳಿದಿರುವ ಆಶಾಕಿರಣವಾಗಿದೆ. ★

ಶಾಶ್ವತ ಅರ್ಥಶಾಸ್ತ್ರ-೧೬

– ಜೆ. ಸಿ. ಕುಮಾರಪ್ಪ

(ಜೆ.ಸಿ. ಕುಮಾರಪ್ಪ ಪಾಶ್ಚಿಮಾತ್ಯ ಅರ್ಥಶಾಸ್ತ್ರ ಓದಿ ನಂತರ ಗಾಂಧೀಜಿಯವರ ಪ್ರಭಾವಕ್ಕೆ ಒಳಗಾಗಿದ್ದ ಓರ್ವ ವಿಚಾರವಂತ ವ್ಯಕ್ತಿ. ಅವರು ಗಾಂಧೀಜಿಯವರ ವಿಚಾರಗಳಿಗೆ ಮುಖ್ಯವಾಗಿ, ಆರ್ಥಿಕ ವಿಚಾರಗಳಿಗೆ, ಒಂದು ಸ್ವರೂಪ ಕೊಟ್ಟರು. ಅದನ್ನು ಅವರು 'ಶಾಶ್ವತ ಅರ್ಥಶಾಸ್ತ್ರ' ಎಂದು ಕರೆದರು. ಈ ಅರ್ಥಶಾಸ್ತ್ರಕ್ಕೂ ಈಗ ಪ್ರಚಲಿತವಿರುವ ಅರ್ಥಶಾಸ್ತ್ರಕ್ಕೂ ಇರುವ ವ್ಯತ್ಯಾಸ ನಮಗೆ ತಿಳಿದರೆ ಅದರಿಂದ ಬಹಳ ಪ್ರಯೋಜನವುಂಟು. ಅದಕ್ಕಾಗಿ ಆ ಪುಸ್ತಕದ ಭಾಗಗಳನ್ನು ಕ್ರಮಶಃ ಪ್ರಕಟಿಸಲಾಗುತ್ತಿದೆ. ಅನುವಾದ ಶ್ರೀ ಸಿದ್ದವನಹಳ್ಳಿ ಕೃಷ್ಣಶರ್ಮ.—ಸಂ.)

ವಿವಿಧೋದ್ದೇಶ್ಯ-ಸಹಕಾರ ಸಂಘಗಳು : ಗ್ರಾಮೋದ್ಯೋಗಗಳನ್ನು ಬೆಳೆಸಲಾಗಲಿ ಗ್ರಾಮಸ್ಥರು ಊರೊಟ್ಟಿನ ಕೆಲಸಮಾಡಲಾಗಲಿ ಸಹಕಾರ ಸಂಘಗಳು ಬಹಳ ಮುಖ್ಯ ಸಾಧನ. ವಿವಿಧೋದ್ದೇಶ್ಯದ ಗ್ರಾಮ ಸಹಕಾರ ಸಂಘವೊಂದಿದ್ದರೆ ಹಲವು ಬಗೆಯಲ್ಲಿ ಪರಿಣಾಮಕಾರಿಯಾಗಿ ಕೆಲಸ ಮಾಡಬಹುದು: ೧. ಹಳ್ಳಿಯವರಿಗೆ ಬೇಕಾದ ಧಾನ್ಯವನ್ನು, ಗ್ರಾಮೋದ್ಯೋಗಗಳಿಗೆ ಅಗತ್ಯವಾದ ಸಾಮಗ್ರಿಯನ್ನು ಸಂಗ್ರಹಿಸಿಡಬಹುದು. ೨. ಹಳ್ಳಿಗೆ ಸಾಕಾಗಿ ಉಳಿದ ಪದಾರ್ಥಗಳನ್ನು ಹೊರಗೆ ಸಾಗಿಸುವುದು, ಹಳ್ಳಿಯವರಿಗೆ ಅಗತ್ಯವಾದುದನ್ನು ಹಂಚುವುದು. ೩. ಬೀಜದ ಕಾಳು, ಸುಧಾರಿಸಿದ ಮುಟ್ಟು, ಉಪಕರಣಗಳು, ಮೂಳೆ ಗೊಬ್ಬರ, ಮೀನು ಗೊಬ್ಬರ ಒದಗಿಸುವುದು. ೪. ಸುತ್ತಮುತ್ತಲಿನ ಪ್ರದೇಶಕ್ಕೆ ಒಂದು ಬೀಜದ ಹೋರಿಯನ್ನು ಸಾಕುವುದು. ೫. ಕಂದಾಯ, ತೆರಿಗೆ ವಸೂಲಿಯಲ್ಲಿ ಜನಕ್ಕೂ ಸರಕಾರಕ್ಕೂ ಮಧ್ಯವರ್ತಿಯಾಗಿ ಇರುವುದು-ಇತ್ಯಾದಿ.

ಧಾನ್ಯವನ್ನು ಸಾಗಿಸುವಾಗ ಆಗುವ ನಷ್ಟ, ಧಾನ್ಯವನ್ನೆಲ್ಲ ಒಂದು ಕಡೆ ತಂದು ಹಾಕಿ ಅಲ್ಲಿಂದ ಮತ್ತೆ ಹಳ್ಳಿಗಳಿಗೆ ಒಯ್ದು ಒದಗಿಸುವ ವೆಚ್ಚವೆಲ್ಲ ಈ ಸಹಕಾರ ಸಂಘಗಳ ಮೂಲಕ ತಪ್ಪುತ್ತದೆ. ಸರಕಾರಕ್ಕೂ ಜನರಿಗೂ ಸಹಕಾರ ಸಂಘಗಳು ಉತ್ತಮವ್ಯಾವಹಾರಿಕ ವ್ಯವಸ್ಥೆ.

ಒಬ್ಬ ರೈತ ತಾನು ಬೆಳೆದ ಗೋಧಿಯಲ್ಲಿ ತನಗೆ ಬೇಕಾದಷ್ಟನ್ನು ಇಟ್ಟುಕೊಂಡು ಹೆಚ್ಚಾದುದನ್ನು ಸಹಕಾರ ಸಂಘಕ್ಕೆ ಕೊಡುತ್ತಾನೆ. ಆ ಧಾನ್ಯದ ಆಧಾರದ ಮೇಲೆ ಸಂಘದಿಂದ ತನಗೆ ಬೇಕಾದ ಉಳಿದ ಪದಾರ್ಥಗಳನ್ನು ತೆಗೆದುಕೊಳ್ಳುತ್ತಾನೆ. ಸರಕಾರದ ಕಂದಾಯವನ್ನೂ ಕಾಳಿನ ರೂಪದಲ್ಲಿ ಕೊಡಬಹುದು, ಹಣವಾಗಿ ಕೊಡಬೇಕಾದುದಿಲ್ಲ. ಈಗ ಹಣದ ರೂಪದಲ್ಲಿ ಕಂದಾಯವನ್ನು ತೆಗೆದುಕೊಳ್ಳುತ್ತಿರುವುದು ಧಾನ್ಯ ಸಂಗ್ರಹ ಮಾಡಿದರೆ, ಹಳ್ಳಿಯವರಿಗೆ ಬಹಳ ತೊಂದರೆಯಾಗದು. ಹಳ್ಳಿಗಳಲ್ಲಿ ಸಹಕಾರ ಸಂಘ ಸ್ಥಳೀಯ ಅಧಿಕಾರಿಗಳ ಸಂಬಳವನ್ನೂ ಸ್ವಲ್ಪಭಾಗ ಧಾನ್ಯರೂಪದಲ್ಲಿಯೆ ಕೊಡಬಹುದು.

ಹಣದ ಅರ್ಥವ್ಯವಸ್ಥೆ ನಿಜವಾದ ಬೆಲೆಗಳನ್ನು ತಿಳಿಸದು. ಒಬ್ಬರ ಕೈಯಿಂದ ಒಬ್ಬರಿಗೆ ಸಾಗಿಹೋದಾಗ ಹಣದ ಬೆಲೆ ವ್ಯತ್ಯಾಸವಾಗುತ್ತದೆ. ಬಡವನ ಕೈಯಲ್ಲಿ ಒಂದು ರೂಪಾಯಿ ಇದ್ದರೆ ಅದರ ಬೆಲೆ ಬೇರೆ, ಹಣವಂತನ ಕೈಯಲ್ಲಿದ್ದರೆ ಅದರ ಬೆಲೆಯೇ ಬೇರೆ. ಈ ಬಗೆಯ ಹಸ್ತಾಂತರಗಳು ರಾಷ್ಟ್ರದ ಸಂಪತ್ತನ್ನು ಹೆಚ್ಚಿಸಲೂ ಬಹುದು, ತಗ್ಗಿಸಲೂಬಹುದು. ಮೇಲೆ ನೋಡಲಿಕ್ಕೆ ರೂಪಾಯಿ ರೂಪಾಯಿಯೇ, ಆದರೆ ವ್ಯವಹಾರದಲ್ಲಿ ವಾಸ್ತವವಾಗಿ ಹಾಗಲ್ಲ. ಒಬ್ಬ ಬಡವನ ಕೈಯಲ್ಲಿ ಒಂದು ರೂಪಾಯಿ ಇದ್ದರೆ ೪-೫ ದಿನದ ಅನ್ನವಾಯಿತು. ಒಬ್ಬ ಭಾಗ್ಯವಂತನ ಕೈಯಲ್ಲಿದ್ದರೆ ಅದರ ಯೋಗ್ಯತೆ ಒಂದು ಚುಟ್ಟಾ. ಹೀಗೆ, ಒಂದು ರೂಪಾಯಿ ಬಡವನ ಕೈಯಿಂದ ಭಾಗ್ಯವಂತನ ಕೈಗೆ ಹೋದರೆ ಅದರ ಬೆಲೆ ಬಹಳ ಮಟ್ಟಿಗೆ ತಗ್ಗಿತು. ಅದೇ ರೀತಿ ಹಣವಂತನ ಕೈಯಿಂದ ಬಡವನ ಕೈಗೆ ರೂಪಾಯಿ ಬಂದರೆ ಅದರ ಬೆಲೆ ಹೆಚ್ಚುತ್ತದೆ. ಆದುದರಿಂದ ಯಾರ ಕೈಗೆ ಹೋದರೆ ಹಣದ ಬೆಲೆಯೇ ಕಡಮೆಯಾಗುತ್ತದೆಯೋ ಅಂಥವರ ಕೈಗೆ ಹಣ ಹೋಗದ ಹಾಗೆ ನಮ್ಮ ಆರ್ಥಿಕ ರಚನೆ ಮಾಡಬೇಕು, ವಿವಿಧೋದ್ದೇಶ್ಯದ ಸಹಕಾರ ಸಂಘಗಳು ಮಾಡಬೇಕಾದ ಕೆಲಸ ಇದೆ. ಹಳ್ಳಿಯವರಿಂದ ಜೋಳ-ರಾಗಿಯನ್ನು ಸಂಗ್ರಹಿಸಿ ಸರಕಾರಕ್ಕೆ ಕಾಳಿನ ರೂಪದಲ್ಲಿಯೆ ಕಂದಾಯ ಕೊಡಬಹುದು. ಸರಕಾರದ ಲೆಕ್ಕದಲ್ಲಿ, ಅಧಿಕಾರಿಗಳಿಗೆ ಆಹಾರ ಪದಾರ್ಥಗಳನ್ನು ಕೊಡಬಲ್ಲವು. ಅದರಿಂದ ಜನರಿಗೆ ಸಮಗ್ರ ಆಹಾರ ಸಿಗುತ್ತದೆ. ಇದನ್ನೆಲ್ಲಾ ಸರಿಯಾಗಿ ನಡೆಸಿದರೆ ಕಡೆಗೆ ಸರಕಾರಕ್ಕೆ ಕೊಡಬೇಕಾದ ಹಣ ಬಹಳ ಸ್ವಲ್ಪ ಆಗುತ್ತದೆ. ಅದನ್ನೂ ಕೂಡ, ಬೇರೆ ಬೇರೆ ಜಿಲ್ಲೆಗಳಿಗೆ, ಇಲ್ಲಿ ಹೆಚ್ಚಾಗಿ ಅಲ್ಲಿ ಬೇಕಾದ ಧಾನ್ಯವನ್ನು ಕಳಿಸಿ ಮುಟ್ಟಿಸಬಹುದು. ಹೀಗೆ ಮಾಡಲು ಸಾಧ್ಯವಾದರೆ ಹಣ ಪ್ರಪಂಚದ ಕೆಡುಕನ್ನು ಪೂರ್ಣವಾಗಿ ತೊಡೆದೆ ಹಾಕಲು ಆಗದಿದ್ದರೂ ಬಹುಮಟ್ಟಿಗೆ ಕಡಮೆ ಮಾಡಿಬಿಡಬಹುದು. ಆಗ ಹಣದ ಮಾಯಾ ಪ್ರಪಂಚ ಅಳಿದು ಹೋಗಿ ವಸ್ತುಗಳ ವಾಸ್ತವ ಪ್ರಪಂಚ ದೃಢವಾಗುತ್ತದೆ.

ಸಹಕಾರದ ಕೆಲಸ

ಬ್ಯಾಂಕಿನ ಕೆಲಸ : ವ್ಯಾಪಾರ-ಉದ್ಯೋಗಗಳ ರಥದ ಚಕ್ರ ಸರಾಗವಾಗಿ ತಿರುಗು

ವಂತೆ, ಸುಲಭವಾಗಿ ತಿಕ್ಕಾಟವಿಲ್ಲದಂತೆ ಮುಂದೆ ಉರುಳುವಂತೆ, ಕೀಲೆಣ್ಣೆ ಸವರುವುದೇ ಬ್ಯಾಂಕುಗಳ ಕೆಲಸ. ಸಹಕಾರ ಸಂಸ್ಥೆಯಾದರೆ ಈ ಕೆಲಸವನ್ನು ಮಾಡುವುದರ ಜೊತೆಗೆ ಇಡೀ ಆರ್ಥಿಕ ರಚನೆಯಲ್ಲಿನ ಬೇರೆ ಬೇರೆ ಅಂಗಗಳೆಲ್ಲಾ ಪರಸ್ಪರ ಸಹಕರಿಸುವಂತೆಯೂ ಮಾಡಬೇಕು.

ಪಶ್ಚಿಮ ದೇಶದ ಬ್ಯಾಂಕುಗಳು ಹಣ ಪ್ರಪಂಚದವು. ಬ್ಯಾಂಕಿಗೆ ಎಷ್ಟು ಹಣ ಠೇವಣಿ ಬಂತು, ಎಷ್ಟು ಲಾಭ ಬಂತು ಎಂಬುದು ಅವರ ಪ್ರಗತಿಯ ಅಳತೆ. ನಾವು ಹಾಗೆ ಮಾಡಲಾಗುವುದಿಲ್ಲ. ಸುತ್ತಲಿನ ಜನ ಜೀವನಕ್ಕೆ ಎಷ್ಟು ಸುಖ-ಸಂತೋಷಗಳನ್ನು ಕೊಟ್ಟಿತು ಬ್ಯಾಂಕು ಎಂಬುದು ನಮ್ಮ ಅಳತೆ. ಜನರ ಆರ್ಥಿಕ ಜೀವನಕ್ಕೆ ಸಂಬಂಧಿಸಿದ ಹಲವು ಕೆಲಸಗಳನ್ನು ಅದು ನಿರ್ವಹಿಸಬೇಕು. ಹಣ ನಷ್ಟವಾದರೂ ಚಿಂತೆಯಿಲ್ಲ, ಜನರಿಗೆ ಸೌಕರ್ಯ ಮಾಡಬೇಕು. ಬರೀ ರೂಪಾಯಿ ಆಣೆ ಕಾಸಿನ ಲೆಕ್ಕಮಾಡಿ ಜನಜೀವನದಲ್ಲಿ ಬ್ಯಾಂಕು ಏನು ಪಾತ್ರ ವಹಿಸಿತು ಎಂಬುದನ್ನು ತಿಳಿಯಲು ಸಾಧ್ಯವಿಲ್ಲ.

ಮನುಷ್ಯನ ಮೈಯಿಂದ ರಕ್ತವನ್ನು ತೆಗೆದುಕೊಳ್ಳಲು ಒಂದು ಬಗೆಯ ಪಿಚಕಾರಿ, ಅದಕ್ಕೊಂದು ಸೂಜಿ ಇರುತ್ತವೆ. ಪಶ್ಚಿಮ ಸೀಮೆಗಳ ಬ್ಯಾಂಕು-ಲೇವಾದೇವಿ ಪದ್ಧತಿ-ಉತ್ಪಾದಕರ ಮೈಯಿಂದ ಪ್ರಾಣವನ್ನೇ ಹೀರುವ ಪಿಚಕಾರಿ–ಸೂಜಿ ಇದ್ದಂತೆ. ಬಂಡವಾಳಗಾರರು ಅದನ್ನು ಉಪಯೋಗಿಸುತ್ತಾರೆ. ೧೯೪೩ ರಲ್ಲಿ ಬಂಗಾಳದಲ್ಲಿ ಭೀಕರ ಕ್ಷಾಮ ಬಡಿದು ೩೦ ಲಕ್ಷ ಜನ ಸತ್ತರಲ್ಲ. ಅದು ರಿಸರ್ವ್ ಬ್ಯಾಂಕಿನ ಅಧಿಕಾರದ ದುರುಪಯೋಗದ ಫಲ. ಸಾರ್ವಜನಿಕರ ಹಣ, ರಾಷ್ಟ್ರದ ಹಣ, ಆ ಬ್ಯಾಂಕಿನಲ್ಲಿ ಇರುತ್ತದೆ. ಅವುಗಳ ಕೆಲಸದಿಂದ ದೇಶದ ಜನಕ್ಕೆ ಅಪಾರ ಹಾನಿಯಾಗುತ್ತದೆ. ಹಣದ ದುರುಪಯೋಗವೇ ಇದಕ್ಕೆ ಕಾರಣ.

ಹಣ-ಶಕ್ತಿಯು ಕ್ರಯ ನಿಧಿ: ಹಣ ಉಳಿದ ಪದಾರ್ಥಗಳಿಗಿಂತ ಹೆಚ್ಚು ಶಾಶ್ವತ. ಅದರ ಈ ಗುಣವನ್ನು ಸರಿಯಾಗಿ ಉಪಯೋಗಿಸಿದರೆ ಜನರಿಗೆ ಅದು ಕ್ರಯಶಕ್ತಿಯ ನಿಧಿಯಾಗಬಲ್ಲದು. ರೈತ ತನ್ನ ಹೊಲದಲ್ಲಿ ಬೇಸಾಯಮಾಡಿ ಸುಗ್ಗಿಯಾದ ಮೇಲೆ ಬೆಳೆಯನ್ನೆಲ್ಲ ಮಾರಿಬಿಡುತ್ತಾನೆ. ಅವನ ಕೈಗೆ ಸ್ವಲ್ಪ ಹಣ ಬರುತ್ತದೆ. ಮುಂದಿನ ಸುಗ್ಗಿಯವರೆಗೆ ಅವನಿಗೆ ಈ ಹಣದಿಂದಲೇ ನಿರ್ವಾಹ. ಮುಂದಿನ ೧೨ ತಿಂಗಳು ಕಾಲ ಅವನು ಬೇರೆ ಪದಾರ್ಥಗಳನ್ನು ಪಡೆಯಲು ಈ ಹಣವನ್ನು ವಿನಿಮಯ ಮಾಡಬೇಕು. ಈ ೧೨ ತಿಂಗಳಲ್ಲಿ ಕ್ರಯಶಕ್ತಿಯಲ್ಲಿ ಏನಾದರೂ ವ್ಯತ್ಯಾಸವಾದರೆ ರೈತನ ಪರಿಸ್ಥಿತಿಯೂ ಅಷ್ಟುಮಟ್ಟಿಗೆ ವ್ಯತ್ಯಾಸವಾಗುತ್ತದೆ. ಆದುದರಿಂದ ನಮ್ಮ ದೇಶದಂಥ ವ್ಯವಸಾಯ ಪ್ರಧಾನ ದೇಶದಲ್ಲಿ ಅಚಲವಾದ, ವ್ಯತ್ಯಾಸವಾಗದಂಥ ಕ್ರಯಶಕ್ತಿಯ ನಿಧಿ ಇರಬೇಕು. ವಿವಿಧೋದ್ದೇಶ್ಯದ ಸಹಕಾರ ಸಂಘಗಳು ಈ ಕೆಲಸದಲ್ಲಿ ನೆರವಾಗಬಲ್ಲವು. ಹಣದ ಕಾರುಬಾರನ್ನು ತಡೆಗಟ್ಟಿ, ವ್ಯತ್ಯಾಸ ಏರಿಳಿತಗಳಿಗೆ ಅವಕಾಶವನ್ನು ಕಡಿಮೆಮಾಡಿ, ಪದಾರ್ಥಗಳ ಆಧಾರದ

ಮೇಲೆ ಯೋಗ್ಯ ಲೇವಾದೇವಿ ಮಾಡುತ್ತ, ಒಂದೇ ಸಲಕ್ಕೆ ರೈತ ತನ್ನ ಬೆಳೆಯನ್ನೆಲ್ಲಾ ಮಾರಿಕೊಳ್ಳುವುದನ್ನು ಈ ಸಂಘಗಳು ನಿಲ್ಲಿಸಬಹುದು.

ಸಹಕಾರ : ಸಹಕಾರದ ಎರಡನೆಯ ಕರ್ತವ್ಯಕ್ಕೆ ಬಂದೆವು. ಸಹಕಾರ ಎಂದರೇನೇ ಸ್ಪರ್ಧೆ-ಪೋಟಿ ಇಲ್ಲದೆ ಎಲ್ಲರಿಗೂ ಹಿತವಾಗುವಂತೆ ಒಂದು ರೀತಿಯ ಪಾಲುಗಾರಿಕೆಯಲ್ಲಿ ಕೆಲಸ ಮಾಡುವುದು. ಆ ವ್ಯವಹಾರಕ್ಕೆ ಸಂಬಂಧಿಸಿದ ಜನರೆಲ್ಲ ರಿಗೂ ಅದರಲ್ಲಿ ಒಂದೇ ಬಗೆಯ ಆಸಕ್ತಿಯಿರಬೇಕು-ಇದು ಸಹಕಾರದ ಮೂಲಸ್ತಂಭ. ಸಹಕಾರದಲ್ಲಿ ಶೋಷಣಕ್ಕೆ ಎಡೆಯೇ ಇಲ್ಲ. ಆದುದರಿಂದ ಒಬ್ಬ ಶೋಷಕನಿಗೂ ಅವನಿಗೆ ಬಲಿಯಾದ ಮನುಷ್ಯನಿಗೂ ಸಹಕಾರ ಸಾಧ್ಯವೇ ಅಲ್ಲ. ಪರದೇಶಿಗಳು ತಮ್ಮ ಪದಾರ್ಥಗಳನ್ನು ನಮಗೆ ಮಾರಲು ಬರುತ್ತಾರೆ. ನಮ್ಮ ಸಂಪರ್ಕದಲ್ಲಿ ಅವರಿಗಿರುವ ಆಸಕ್ತಿ ಅಷ್ಟೇ. ಅವರು ಇತರರನ್ನು ರಾಜಕೀಯ ಬಂಧನದಲ್ಲಿ ಹಿಡಿದಿರುವುದೂ ಅದಕ್ಕಾಗಿಯೇ. ಸಹಕಾರ ಸಂಘಗಳು ಕೈಮಗ್ಗದ ನೇಕಾರರಿಗೆ ಅಮೇರಿಕದ ನೂಲನ್ನು ತರಿಸಿ ಕೊಡುವ ಕೆಲಸ ಮಾಡಿದರೆ ಹುಲಿ – ಮೇಕೆಯನ್ನು ಒಟ್ಟಿಗೆ ಕಟ್ಟುವ ಅಸಾಧ್ಯ ಕೆಲಸ ಮಾಡುತ್ತಿದ್ದಾರೆ. ನಿಜವಾದ ಸಹಕಾರ ಪದ್ಧತಿಯಿಂದ ಕೆಲಸ ಮಾಡುತ್ತಿಲ್ಲ. ಆಯಾ ಸ್ಥಳದ ನೂಲುಗಾರರನ್ನೂ ನೇಕಾರರನ್ನೂ ಜೊತೆಗೂಡಿಸಿ ಅವರವರ ಸಂಪರ್ಕ ಬೆಳೆಸಬೇಕಾದುದು ಅವರ ಧರ್ಮ. ಹಳ್ಳಿಯಲ್ಲಿ ಹುಟ್ಟಿದ ಮೂಲ ಪದಾರ್ಥ (ಕಚ್ಚಾ ಮಾಲು), ಹಳ್ಳಿಯ ಉದ್ಯೋಗವಂತ, ಸಿದ್ಧವಾದ ಪದಾರ್ಥಗಳನ್ನು ಬಳಸುವ ಜನ – ಹೀಗೆ ಸಹಕಾರ ಸಂಘಗಳು ಎಳೆಗೂಡಿಸಬೇಕು. ಮುತ್ತಿನ ಸರವನ್ನು ಒಟ್ಟಾಗಿ ಹಿಡಿದಿರುವ ದಾರದಂತೆ ಸಹಕಾರ ಸಂಘಗಳು ಎಲ್ಲಾ ಗುಂಪುಗಳನ್ನೂ ಒಟ್ಟಾಗಿ ಜೋಡಿಸಿ ಹಿಡಿಯಬೇಕು.

ಇಂಥ ಸಹಕಾರ ಸಂಘಗಳು, ನಿಷ್ಕಪಟಿಗಳಾದ ಹಳ್ಳಿಯವರು ಸರಕಾರಿ ಅಧಿಕಾರಿಗಳ ಮೋಸಕ್ಕೆ ಬಲಿಯಾಗದಂತೆ ಕಾಪಾಡಬಲ್ಲವು. ಬೆಳೆದ ಬೆಳೆಯನ್ನು ಶೇಖರಿಸಿಟ್ಟುಕೊಂಡು, ಸಾಲ, ತೆರಿಗೆ ಕಂದಾಯ ಎಲ್ಲವನ್ನೂ ಕೊಟ್ಟು, ಬೆಳೆಯನ್ನೆಲ್ಲಾ ಒಂದೇ ಸಲ ಸಂತೆಗೆ ಹಾಕಿ ಧಾರಣೆಯನ್ನು ಅತಿಯಾಗಿ ಏರುಪೇರಿಗೆ ಸಿಗಿಸದಂತೆ ತಡೆಹಿಡಿದಿಟ್ಟುಕೊಂಡು, ಸಕಾಲದಲ್ಲಿ ಸರಿಯಾದ ಧಾರಣೆಗೆ ಮಾರಿ ರೈತರಿಗೆ ಅನುಕೂಲ ಮಾಡಬಲ್ಲವು ಈ ಸಂಸ್ಥೆಗಳು. ಆರ್ಥಿಕ ಕ್ಷೇತ್ರದಲ್ಲಿ ಏನೇ ಪೆಟ್ಟು ತಗಲಿದರೂ ಸೈರಿಸಿಕೊಂಡು ಆ ಪೆಟ್ಟು ರೈತರಿಗೆ ತಗಲದಂತೆ ಈ ಸಂಘಗಳು ಮಾಡಬಲ್ಲವು.

ಸಹಕಾರ ಸಂಸ್ಥೆಗಳು ಸರಿಯಾಗಿ ನಡೆಯುತ್ತಿದೆಯೆ ಎಂಬುದರ ಪರೀಕ್ಷೆ ಅವುಗಳ ಆದಾಯ-ವ್ಯಯದ ಪಟ್ಟಿಗಳಲ್ಲಿಲ್ಲ; ಸುತ್ತಲಿನ ಪೇಟೆಯಲ್ಲಿ ಕಾಣುತ್ತದೆ. ಊರಿನ ಅಂಗಡಿಗಳಲ್ಲಿ ಗಿರಣಿಯ ಪದಾರ್ಥಗಳೂ ಪರದೇಶಿ ವಸ್ತುಗಳೂ ತುಂಬಿದ್ದರೆ, ನಮ್ಮ ಅಗತ್ಯಗಳನ್ನು ತೃಪ್ತಿಪಡಿಸಲು ಸ್ಥಳೀಯ ಸಾಧನಗಳನ್ನು ಒಟ್ಟುಗೂಡಿಸಿ ಉತ್ಪತ್ತಿ ಮಾಡಿಸುವ ಸಹಕಾರ ಪ್ರಯತ್ನ ನಡೆದಿಲ್ಲವೆಂಬುದು ಸ್ಪಷ್ಟ. ಸಹಕಾರ ಸಂಸ್ಥೆಗಳು ಸರಿಯಾಗಿ ಕೆಲಸ ಮಾಡಿದರೆ ನಮ್ಮ ಪ್ರಾಥಮಿಕ ಅಗತ್ಯಗಳಾದ ಅನ್ನ,

ಬಟ್ಟೆ, ವಸತಿಗಳ ಬಗ್ಗೆ ನಾವು ಸಂಪೂರ್ಣರಾಗಲು ನೆರವಾಗುತ್ತದೆ. ಇದನ್ನು ಸಾಧಿಸಿದರೆ ಪರದೇಶದ ಉತ್ಪಾದಕರ ದುರಾಸೆಯನ್ನು ಸೆಳೆಯುವ ಸಂದರ್ಭ ಯಾವುದೂ ಇರದು. ಆಗ ದೇಶದೇಶಗಳ ನಡುವೆ ಅಸೂಯೆಯಿಲ್ಲದೆ, ಜಗತ್-ಯುದ್ಧಗಳಿಗೆ ಅವಕಾಶವಿಲ್ಲದೆ ಹೋಗುತ್ತದೆ. ಸಹಕಾರ ಸಂಸ್ಥೆಗಳನ್ನು ಸರಿಯಾದ ಮಾರ್ಗದಲ್ಲಿ ಬೆಳೆಸಿದರೆ ರಾಷ್ಟ್ರೀಯ ಸ್ವಾತಂತ್ರ್ಯ ಸಿದ್ಧಿಯಾಗಿ, ಅಂತರ್ ರಾಷ್ಟ್ರೀಯ ಶಾಂತಿಗೆ ಸಾಧನವಾಗುತ್ತದೆ.

ಗೊಬ್ಬರ : ಹಳ್ಳಿಯ ಕಸ – ಹೊಲಸು, ಮೂಳೆ, ಮಲ – ಮೂತ್ರ ಎಲ್ಲವೂ ಈಗ ಹಳ್ಳಿಗೆ ಅನಾರೋಗ್ಯಕರವಾಗಿವೆ. ಅದೆಲ್ಲವನ್ನೂ ಕಂಪೋಸ್ಟ್ ಮಾಡಿ ಗೊಬ್ಬರವಾಗಿ ಬಳಸಬಹುದು, ದನದ ಗೊಬ್ಬರದಷ್ಟೇ ಒಳ್ಳೆಯ ಗೊಬ್ಬರ ಇದು. ಇದನು ಬಹಳ ಸುಲಭವಾಗಿ ಮಾಡಬಹುದು. ಸಾಧಾರಣವಾಗಿ ಮೂಳೆಗಳನ್ನೂ ಗಾಣದ ಹಿಂಡಿಯನ್ನೂ ದೇಶದಿಂದ ಹೊರಗೆ ಸಾಗಿಸುತ್ತಾರೆ. ಅದನ್ನು ಹಳ್ಳಿಗಳಿಂದ ಹೊರಗೆ ಸಾಗದ ಹಾಗೆ ನೋಡಿಕೊಳ್ಳಬೇಕು. ಮೂಳೆಗಳನ್ನು ಹಳ್ಳಿಯಲ್ಲಿಯೇ ಪುಡಿಮಾಡಬೇಕು. ಅವನ್ನು ಸುಣ್ಣದ ಭಟ್ಟಿಗಳಲ್ಲಿ ಸ್ವಲ್ಪ ಸುಟ್ಟು ಗಾಣಕ್ಕೆ ಹಾಕಿ ತಿರುವಿದರೆ ಸಾಕು. ಆ ಪುಡಿಯನ್ನು ರೈತರಿಗೆ ಹಂಚಬೇಕು. ಊರಿನ ಕಸ ಹೊಲಸನ್ನು ಗೊಬ್ಬರ ಮಾಡಲು ಯಾರಿಗಾದರೂ ಗುತ್ತಿ ಕೊಡಬಹುದು. ಇದರಿಂದ ಊರು ಚೊಕ್ಕಟವಾಯಿತು, ಕಸ ಗುಡಿಸುವವರ ಮರ್ಯಾದೆ ಹೆಚ್ಚಾಯಿತು. ಗೊಬ್ಬರ ಮಾಡಿ ಮಾರುವ ಅಂತಸ್ತಿಗೆ ಅವರು ಬಂದರು.

ಹಳ್ಳಿಯ ಎಣ್ಣೆ ಬೀಜಗಳನ್ನೆಲ್ಲ ದೋಚಿಕೊಂಡೊಯ್ದು ಹಳ್ಳಿಗಳಿಗೆ ಬರೀ ಎಣ್ಣೆಯನ್ನು ಕೊಟ್ಟು, ಹಿಂಡಿಯನ್ನೆಲ್ಲ ಪರದೇಶಗಳಿಗೆ ಕಳಿಸುವ ಎಣ್ಣೆಗಿರಣಿಗಳು ನಮ್ಮ ಭೂಮಿಯ ಹುಲುಸನ್ನು ಕಾಪಾಡುವ ಮುಖ್ಯ ವಸ್ತುವನ್ನೆ ನಾಶಮಾಡುತ್ತಿವೆ. ಇದನ್ನು ಪೂರ್ಣವಾಗಿ ನಿಲ್ಲಿಸಲೇಬೇಕು. ಎಣ್ಣೆ ಬೀಜಗಳು ಊರಿನಿಂದ ಹೊರಗೆ ಹೋಗಬಾರದು, ಅಲ್ಲೇ ಗಾಣದಲ್ಲಿ ಎಣ್ಣೆಯಾಗಬೇಕು ಎನ್ನಲು ಇದೂ ಒಂದು ಮುಖ್ಯ ಕಾರಣ. ಅದರಿಂದ ಹಳ್ಳಿಯಲ್ಲಿ ಎಣ್ಣೆಯೂ ಉಳಿಯಿತು, ಹಿಂಡಿಯೂ ಸಿಕ್ಕಿತು. ಭೂಮಿ ಹುಲಸಾಯಿತು, ದನಕ್ಕೆ ತಿನಿಸಾಯಿತು, ಜನಕ್ಕೆ ಲಾಭವಾಯಿತು.

ಭೂಮಿಯ ಸಾರವನ್ನು ಹೆಚ್ಚಿಸುತ್ತೇವೆ ಎಂದು ರಾಸಾಯನಿಕ ಗೊಬ್ಬರಗಳನ್ನು ತಂದು ಹಾಕುವ ಪ್ರಯತ್ನಗಳು ಈಗ ನಡೆಯುತ್ತಿವೆ. ಜಗತ್ತಿನಲ್ಲಿ ನಾನಾ ಪ್ರದೇಶಗಳಲ್ಲಿ ಈ ಗೊಬ್ಬರದಿಂದ ಆದ ಪರಿಣಾಮ ನಮಗೆ ಎಚ್ಚರಿಕೆ ಹೇಳುತ್ತಲೇ ಇದೆ. ಅವು ನೆಲಕ್ಕೆ ಸಾರವನ್ನು ಕೊಡುವುದಂತೂ ಇಲ್ಲ. ತಾತ್ಕಾಲಿಕ ಸ್ಫೂರ್ತಿ ಕೊಡುವ ಔಷಧಗಳಂತೆ ಒಡನೆಯೆ ಹೆಚ್ಚಾಗಿ ಬೆಳೆ ಕೊಡುವಂತೆ ಮಾಡುತ್ತವೆ. ಆದರೆ ಕ್ರಮೇಣ ಭೂಮಿ ನಿಸ್ಸಾರವಾಗಿ ಬೀಕಲಾಗುತ್ತದೆ. ಈ ರಾಸಾಯನಿಕ ಗೊಬ್ಬರದ ಪ್ರಚಾರ ಮಾಡುವವರಿಗೆ ತಮ್ಮ ಗೊಬ್ಬರದ ಕಾರಖಾನೆಯ ಪದಾರ್ಥವನ್ನು ಮಾರುವ ಚಿಂತೆ

ಯೊಂದೇ ಗೊತ್ತು; ಅದರಿಂದ ವ್ಯವಸಾಯಕ್ಕೆ ಏನೇ ಬಾಧಕವಾಗಲಿ.

ಬೀಜ : ವ್ಯವಸಾಯ ವೃದ್ಧಿಯಾಗಬೇಕಾದರೆ ಆರಿಸಿದ, ಸುಧಾರಿಸಿದ ಬೀಜದ ಬಹಳ ಅಗತ್ಯ. ಸಹಕಾರ ಸಂಘಗಳು ಬೀಜದ ಉತ್ಪತ್ತಿಗಾಗಿಯೆ ಪ್ರತ್ಯೇಕ ಕ್ಷೇತ್ರಗಳಲ್ಲಿ ತಜ್ಞರ ಮೂಲಕ ಬೇಸಾಯ ಮಾಡಿಸಿ ಆ ಬೀಜವನ್ನು ರೈತರಿಗೆ ಹಂಚಬೇಕು.

ಧಾನ್ಯ ಸಂಗ್ರಹ : ದವಸವನ್ನು ಸಂಗ್ರಹಿಸಿಡುವ ಪದ್ಧತಿಯಿಂದ ಬಹಳ ನಷ್ಟವಾಗುತ್ತದೆ. ಬಹಳ ಕಡಿಮೆಯೆಂದರೂ ಈ ನಷ್ಟ ೩೫ ಲಕ್ಷ ಟನ್ ಎಂದು ಲೆಕ್ಕ ಹಾಕಿದ್ದಾರೆ. ೧೯೪೬ ರಲ್ಲಿ ನಮ್ಮ ದೇಶಕ್ಕೆ ಕಡಮೆ ಬಿದ್ದ ಧಾನ್ಯದ ಲೆಕ್ಕವೂ ಇಷ್ಟೇ. ಇದಲ್ಲದೆ ದವಸಕ್ಕೆ ಹುಳ ಬಿದ್ದು, ನೀರು ತಗಲಿ ದವಸ ಕೆಟ್ಟು ಅದರಿಂದಾಗುವ ನಾನಾ ರೀತಿಯ ಕಾಯಿಲೆಗಳ ಬಾಧೆಯ ನಷ್ಟವೂ ಹೆಚ್ಚೇ.

ಆಯಾ ಸ್ಥಳದಲ್ಲಿಯೇ ದವಸದ ಸಂಗ್ರಹ ಮಾಡಿದರೆ ಈ ನಷ್ಟವೂ ಅಲ್ಲಿಂದಿಲ್ಲಿಗೆ ಸಾಗಿಸುವ ಬಾಡಿಗೆಯೂ ಉಳಿಯುತ್ತದೆ.

ಧಾನ್ಯ ಸಂಗ್ರಹದ್ದು ಬಹಳ ಅವಸರದ ಪ್ರಶ್ನೆ, ಸದಾ ಕಾಲದ ಸಮಸ್ಯೆ. ಅದನ್ನು ಗಂಭೀರವಾಗಿ ಪರಿಹರಿಸಬೇಕು. ಈಗಿನ ಹಾಗೆ ಅವ್ಯವಸ್ಥಿತವಾದ ಗಡಂಗಗಳಲ್ಲಿ ದವಸ ತುಂಬುವುದನ್ನು ತಪ್ಪಿಸಬೇಕು.

ಹೆಚ್ಚು ಧಾನ್ಯವನ್ನು ಸಂಗ್ರಹಿಸಬೇಕಾದ ದೊಡ್ಡ ಪಟ್ಟಣಗಳಲ್ಲಿ ಶಾಶ್ವತವಾದ ಸಿಮೆಂಟು ಗಡಂಗುಗಳನ್ನೇ ಕಟ್ಟಬಹುದು. ಪೌರಸಭೆಯವರೋ ಖಾಸಗಿ ಜನರೋ ಕಟ್ಟಿಸಿ ಬಾಡಿಗೆಗೆ ಕೊಡಬಹುದು. ಸಹಕಾರ ಸಂಸ್ಥೆಗಳವರು ಕಟ್ಟಿಸಿ ಬಾಡಿಗೆಗೆ ಕೊಡಬಹುದು. ಈ ಗಡಂಗುಗಳನ್ನು ಆಗಾಗ ಪರೀಕ್ಷೆ ಮಾಡಲು ಅವಕಾಶವಿರುವಂತೆ ಮಾಡಬೇಕು. ಈಗ ಕಾರಖಾನೆಯ ಯಂತ್ರಗಳ ಪರೀಕ್ಷೆಯ ವ್ಯವಸ್ಥೆಯಿರುವಂತೆ.

ದವಸ ಬೆಳೆದ ಹಳ್ಳಿಗಳಲ್ಲಿಯೇ ಸಂಗ್ರಹಕ್ಕೂ ಏರ್ಪಾಟು ಮಾಡಿದರೆ, ಅದನ್ನು ಮೊದಲು ಪಟ್ಟಣಗಳಿಗೂ ಆಮೇಲೆ ಮತ್ತೆ ಹಳ್ಳಿಗಳಿಗೂ ಸಾಗಿಸುವುದು ತಪ್ಪಿ. ದವಸ ಕೆಡುವ ಅವಕಾಶ ಕಡಮೆಯಾಗುತ್ತದೆ.

ಪ್ರತಿಯೊಬ್ಬರಿಗೂ ದವಸವನ್ನು ಹೇಗೆ ತೆಗೆದಿಡಬೇಕೆಂಬುದನ್ನು ಹೇಳಿ ಕೊಡಬೇಕು.

ಹಳ್ಳಿಗಳಲ್ಲಿ ಕಚ್ಚಾ ಮಾಲನ್ನು ಉಳಿಸಬೇಕು : ಗ್ರಾಮೋದ್ಯೋಗಗಳಿಗಿರುವ ಮುಖ್ಯ ಆತಂಕ ಕೆಲಸಗಾರನ ನಿಸ್ಸಹಾಯಕತೆ. ಸಂಘಟನೆಯಿಲ್ಲದುದರಿಂದ ಹೆಚ್ಚು ಸಂಘಟನೆ, ಅನುಕೂಲ ಇರುವ ಗಿರಣಿಗಳ ಸ್ಪರ್ಧೆಯ ಇದಿರು ಅವನು ನಿಲ್ಲಲಾರ. ಬೇಕಾದಷ್ಟು ಅನುಕೂಲವಿರುವುದರಿಂದ ಗಿರಣಿಗಳು ಕಚ್ಚಾ ಮಾಲನ್ನೆಲ್ಲಾ ತಾವೇ ಆಕ್ರಮಿಸಿಕೊಂಡು, ನಿಸ್ಸಹಾಯನಾದ ಕೆಲಸಗಾರನ ಪದಾರ್ಥಗಳಿಗೆ ಪೇಟೆಯಲ್ಲಿಯೂ

ಸ್ಥಳವಿಲ್ಲದ ಹಾಗೆ ವ್ಯಾಪಿಸಿಕೊಂಡು ಬಿಡುತ್ತವೆ. ಬ್ಯಾಂಕುಗಳ ಹಣಕಾಸಿನ ಧೋರಣೆ, ರೈಲಿನ ಬಾಡಿಗೆಯಲ್ಲಿ ಗಿರಣಿಗಳಿಗೆ ತೋರಿಸುವ ಪಕ್ಷಪಾತ, ಬಂಡವಾಳ ಗಾರಿಕೆಯ ವ್ಯಾಪಾರ ಸಂಸ್ಥೆ, ಎಲ್ಲವೂ ಚಿಕ್ಕ ಪುಟ್ಟ ಒಂಟಿ ಕೆಲಸಗಾರರನ್ನು ಹಿಸುಕಿ ಹಾಕಿ ದೊಡ್ಡ ಪ್ರಮಾಣದ ಉತ್ಪಾದನೆಯನ್ನೇ ಬೆಳೆಸುತ್ತವೆ. ಹಳ್ಳಿಗಳಲ್ಲಿ ಕೆಲಸ ಗಾರನಿಗೆ ಬೇಕೆಂದರೂ ಕಚ್ಚಾ ಮಾಲು ಸಿಗದು. ಈ ಕ್ರಮ ತಿರುಗುಮುರುಗಾಗಬೇಕು. ಹಳ್ಳಿಯಲ್ಲಿ ಬೆಳೆದ ಪದಾರ್ಥವೆಲ್ಲ ಅಲ್ಲಿಯೇ ವಿನಿಯೋಗಬೇಕು. ಸ್ಥಳೀಯ ಅವಶ್ಯ ಕತೆಗಳನ್ನೆಲ್ಲ ಪೂರಯಿಸಿದ ಮೇಲೆ, ಉಳಿದುದನ್ನು ಮಾತ್ರವೇ ಹೊರಗೆ ಕಳಿಸಲು ಬಿಡಬೇಕು. ಗ್ರಾಮೋದ್ಯೋಗಗಳಿಗೆ ಅಗತ್ಯವಾದ ವಸ್ತುಗಳನ್ನು ಉತ್ಪತ್ತಿ ಮಾಡ ಬೇಕೇ ವಿನಾ ಗಿರಣಿಗಳಿಗೆ ಬೇಕಾದುದನ್ನು ಬೆಳೆಯಲಾಗದು.

ಉಪಕರಣಗಳ ಸರಬರಾಜು : ಗ್ರಾಮೋದ್ಯೋಗಗಳಿಗೆ ಬೇಕಾದ ಉಪಕರಣಗಳು ದೇಶದಲ್ಲಿ ಒಂದೇ ಬಗೆಯಾಗಿಲ್ಲ. ಒಂದೇ ಪ್ರಾಂತದಲ್ಲೂ ಒಂದೇ ಪ್ರಕಾರದ ಉಪಕರಣಗಳು ಇಲ್ಲ. ಉಪಯುಕ್ತವಾದ ಉಪಕರಣಗಳನ್ನು ಸಿದ್ಧಗೊಳಿಸಲು ತಕ್ಕ ಸಂಶೋಧನೆ ನಡೆಯಬೇಕು.

ಜಿಲ್ಲಾ ಪ್ರದರ್ಶನ ಕೇಂದ್ರಗಳು : ಸಹಕಾರ ಸಂಘಗಳ ಪ್ರದರ್ಶನ ಕೇಂದ್ರ ಗಳು ಹಳ್ಳಿಗಳಲ್ಲಿ ಇರಬೇಕು. ಅವುಗಳ ಕರ್ತವ್ಯ ಈ ರೀತಿ :

೧. ಹಳ್ಳಿಯ ಕೈಗಾರಿಕೆಯ ಕಸಬುದಾರರಿಗೆ ಬೇಕಾದ ಮುಟ್ಟು, ಉಪಕರಣ ಗಳನ್ನು ಉತ್ಪತ್ತಿ ಮಾಡಿ ಸರಬರಾಜು ಮಾಡುವುದು; ಹಳೆಯ ಉಪಕರಣಗಳ ಸ್ಥಾನ ದಲ್ಲಿ ಸುಧಾರಿಸಿದ ಹೊಸವನ್ನು ರೂಢಿಗೆ ತರುವುದು.

೨. ಬಡಗಿಗಳನ್ನು ಇತರ ಕೆಲಸಗಾರರನ್ನು ತರಬೇತು ಮಾಡಿ ಬೇರೆ ಬೇರೆ ಉದ್ಯೋಗಗಳಲ್ಲಿ ರೂಢಿಗೆ ಬಂದ ಹೊಸ ಪದ್ಧತಿಗಳನ್ನು ಅವರಿಗೆ ಕಲಿಸುವುದು.

೩. ಉಪಕರಣಗಳನ್ನು, ಸ್ಥಳದ ಕಲಾಕೃತಿಗಳನ್ನು ಸಂಗ್ರಹಿಸಿ ಒಂದು ಸಂಗ್ರಹಾಲಯದಲ್ಲಿಟ್ಟು ಪ್ರದರ್ಶಿಸುವುದು.

೪. ಜಿಲ್ಲೆಯಲ್ಲಿ ಔದ್ಯೋಗಿಕ, ಆರೋಗ್ಯ ವಿಷಯಕ ಪರಿಶೀಲನೆ ನಡೆಸು ವುದು.

೫. ಇತರ ಸಹಕಾರ ಸಂಘಗಳೊಡನೆ, ಮೂಲಶಿಕ್ಷಣ ಶಾಲೆಯೊಡನೆ ಕೂಡಿ ಹಳ್ಳಿಯ ಪುರೋಭಿವೃದ್ಧಿಗಾಗಿ ದುಡಿಯುವುದು.

ಗಾಂಧೀ ವಿರುದ್ಧ ಗಾಂಧೀವಾದಿಗಳು

—ಹೆಚ್. ವೈ. ಶಾರದಾಪ್ರಸಾದ್

ಖ್ಯಾತ ಚಿಂತಕ ಇವಾನ್ ಇಲ್ಲಿಶ್ ಭಾರತಕ್ಕೆ ಆಮಂತ್ರಿತರಾಗಿ, ಆಗಿನ ಪ್ರಧಾನಿ ಶ್ರೀಮತಿ ಗಾಂಧಿ ಇಂದಿರಾ ಗಾಂಧಿಯವರನ್ನು ಭೇಟಿ ಮಾಡಿದಾಗ, "ಈ ದೇಶಕ್ಕೆ ಬರುವ ಇಚ್ಛೆ ನನಗಿರಲಿಲ್ಲ, ನನಗೆ ನಿಮ್ಮ ದೇಶದ ಬಗ್ಗೆ ಸಿಟ್ಟಿದೆ. ನಿಮಗೆ ಗಾಂಧಿ ಬಿಟ್ಟಿಯಾಗಿ ದಕ್ಕಿದರು. ಅದಕ್ಕೇ" ಎಂದಿದ್ದರು. ಕೊಂಚ ಮುಜುಗರ ವಾಗುವಂಥಾ ಈ ನೇರ ನುಡಿ ನಮ್ಮ ಸ್ಥಿತಿಯನ್ನು ಚೆನ್ನಾಗಿ ಹಿಡಿದಿಡುತ್ತೆ.

ಗಾಂಧಿಯ ಔಷಧಿ ಅಷ್ಟಿಷ್ಟಾದರೂ ಈ ದೇಶದ ದೇಹಕ್ಕೆ ಹೊಕ್ಕಿದ್ದರೆ ನಾವು ಹೀಗಿರುತ್ತಿರಲಿಲ್ಲ. ಈಗಂತೂ ಹಿಂಸೆ ದೈನಂದಿನ ರಗಳೆ ಎಂದು ಒಪ್ಪಿಕೊಂಡಿದ್ದೇವೆ. ಪಂಜಾಬ್ ಕಾಶ್ಮೀರಗಳ ಭೀಕರ ಸಾವುಗಳ ಸರಣಿ ಪತ್ರಿಕೆಗಳಲ್ಲಿ ನಿತ್ಯದ ದಾಖಲೆಯಷ್ಟೇ ಆಗಿದೆ. ಟಿ. ವಿ. ರೇಡಿಯೋಗಳಂತೂ ಇವನ್ನು "ಅಹಿತಕರ ಘಟನೆ" ಎಂಬ ಒಂದೇ ಪದದಲ್ಲಿ ನಿರ್ಲಕ್ಷಿಸುತ್ತಿವೆ. ಬೀದಿಯಲ್ಲಿ ಕಲ್ಲು ತೂರುವುದಕ್ಕೂ, ಬಾಂಬು ಎಸೆಯುವುದಕ್ಕೂ ವ್ಯತ್ಯಾಸವೇ ಇಲ್ಲವೇ?

ಗಾಂಧಿಯನ್ನು ಪಡೆಯಲು ನಾವು ಅನರ್ಹರಾಗಿದ್ದೇವೇನೋ ಎಂಬ ಶಂಕೆ ಕೆಲವರಲ್ಲಿ ಬಾಧಿಸಿದರೆ ಅದು ಅಸಂಗತವಲ್ಲವೇನೋ ಶ್ರೀ ಸಿ. ಎಫ್. ಆಂಡ್ರೂಸ್ ಒಮ್ಮೆ ಭಾರತೀಯ ಮನಸ್ಸೇ ಅಹಿಂಸೆಗೆ ತಕ್ಕ ಪಕ್ವತೆ ಪಡೆದಿದೆ ಎಂಬ ವಾದ ಮುಂದಿಟ್ಟಾಗ ಸ್ವತಃ ಗಾಂಧೀಜಿಯವರೇ ಅದನ್ನೊಪ್ಪಿರಲಿಲ್ಲ. ಅವರಿಗೆ ಉತ್ತರಿಸುತ್ತಾ ಗಾಂಧೀ, "ಚಾರಿತ್ರಿಕವಾಗಿ ಇದು ನಿಜವೇ? ಮಹಾಭಾರತ ರಾಮಾಯಣಗಳೆರಡರಲ್ಲೂ ನನಗೆ ಇದು ಕಾಣಿಸುತ್ತಿಲ್ಲ. ಅವತಾರಗಳೆಲ್ಲ ಸೇಡು, ರಕ್ತಪಾತಗಳಿಂದ ತುಂಬಿದೆ. ಯುದ್ಧ, ಯೋಧರ ಶಸ್ತ್ರಾಸ್ತ್ರಗಳ ವಿವರಗಳನ್ನು ನೋಡಿದರೆ ಮನುಷ್ಯನ ಹಿಂಸೆಯ ಕಲ್ಪನಾಶಕ್ತಿಯ ಅರಿವಾಗುತ್ತೆ. ರಾಮನನ್ನು ಹೊಗಳುವ ತುಲಸೀದಾಸರ ಅತ್ಯುತ್ತಮ ಶ್ಲೋಕದಲ್ಲೂ, ಶತ್ರುವನ್ನು ಹೊಡೆದುರುಳಿಸುವ ರಾಮನ ಗುಣವೇ ಮುಖ್ಯವಾಗುತ್ತೆ" ಎಂದು ವಿಶ್ಲೇಷಿಸಿದ್ದರು. ಗಾಂಧಿ ಇದನ್ನು ಬರೆದದ್ದು ೧೯೧೮ರ ಜುಲೈ ೬ರಂದು. ಆಮೇಲೆ ಈ ದೇಶ ಅಹಿಂಸೆಯ ಅಭೂತಪೂರ್ವ ಕ್ಷಣಗಳನ್ನು ಕಂಡಿ

ದ್ದುಂಟು. ಇವೆಲ್ಲ ತಾತ್ಕಾಲಿಕವೇನೋ. ಯಾಕೆಂದರೆ ದೇಶ ವಿಭಜನೆಯ ಕಾಲದ ಮಾರಣಹೋಮ ಚೌರಿಚೌರಾದ ಹಿಂಸೆಯ ಸಾವಿರ ಸಾವಿರ ಪಟ್ಟು ಜಾಸ್ತಿ. ಸ್ವತಃ ಗಾಂಧಿಗೇ ತನ್ನ ಮಾಂತ್ರಿಕ ಶಕ್ತಿಯ ಬಗ್ಗೆ ಸಂದೇಹ ಬಂದಿರಬಹುದು.

ಇಂದು ಹೊಸ ಹೋರಾಟಗಳಿಗೆ ರಾಮ ಮಂತ್ರವನ್ನು ಜಪಿಸುವುದು ಕಾಣ ಬರುತ್ತಿದೆ.

ಗಾಂಧಿ ಅನುಯಾಯಿಗಳು ಈಗೇನು ಮಾಡುತ್ತಿದ್ದಾರೆ? ಗಾಂಧಿ ಆತ್ಮಚರಿತ್ರೆ ಬರೆದ ಶ್ರೀ ಡಿ. ಜಿ. ತೆಂಡೂಲ್ಕರ್ ಅವರಲ್ಲಿ ನಾನೊಮ್ಮೆ ಕೇಳಿದ್ದೆ, "ಆತ್ಮ ಚರಿತ್ರೆ ಬರೆಯ ಬಯಸಿದ ಉಳಿದವರನ್ನು ನಿರುತ್ಸಾಹಗೊಳಿಸಿದ ಗಾಂಧಿ ನಿಮ್ಮ ಜೊತೆ ಹೇಗೆ ಸಹಕರಿಸಿದರು?" ಅಂತ. ಅದಕ್ಕೆ ತೆಂಡೂಲ್ಕರ್ ಉತ್ತರಿಸಿದ್ದರು, "ಗಾಂಧಿಗೆ ಗೊತ್ತಿತ್ತು, ನಾನು ಗಾಂಧಿವಾದಿ ಅಲ್ಲ ಅಂತ. ಅದಕ್ಕೆ ನನ್ನವರು ನಂಬಿದ್ದರು."

ಗಾಂಧಿಗೂ ಗಾಂಧಿವಾದಿಗಳಿಗೂ ಮಧ್ಯೆ ಇನ್ನಿಲ್ಲದ ವ್ಯತ್ಯಾಸ ನನಗೆ ಕಾಣ ಬರುತ್ತಿದೆ. ತಾನು ತಪ್ಪಿರಬಹುದು ಎಂದು ಗಾಂಧಿ ಒಪ್ಪಿಕೊಳ್ಳುತ್ತಿದ್ದರು. ಗಾಂಧಿ ಅನುಯಾಯಿಗಳಿಗೋ ತಾವು ಮತ್ತು ಗಾಂಧಿ ಸದಾ ಸರಿ ದೃಷ್ಟಿ ಹೊಂದಿ ದ್ದೇವೆ ಎಂಬ ನಂಬಿಕೆ. ಗಾಂಧಿ ಸದಾ ಮುಕ್ತ ಮನಸ್ಸು ಹೊಂದಿದ್ದರು. ಗಾಂಧಿ ವಾದಿಗಳೋ ಚೌಕಟ್ಟಿನೊಳಗೇ ನೋಡುತ್ತಾರೆ.

ಗಾಂಧಿ ಬದುಕೇ ಒಂದು ವೈಫಲ್ಯ; ಯಾಕೆಂದರೆ ಜಿನ್ನಾ ಗೆದ್ದು ದೇಶ ಒಡೆ ಯಿತು ಎಂದು ಕೆಲವು ಚರಿತ್ರಕಾರರು ಭಾವಿಸುತ್ತಾರೆ. ಮೂವತ್ತು ವರುಷಗಳ ಬಳಿಕ ಗಾಂಧಿ ಇನ್ನೊಂದು ಹೋರಾಟದಲ್ಲಿ ಸೋಲುವಂತಿದೆ. ಕೋಮು, ಜಾತಿ ವೈಷಮ್ಯಗಳ ಬಗ್ಗೆ ಪರಿಹಾರರೂಪಿ ಕಾರ್ಯಕ್ರಮಗಳಾಗಲೀ, ಚಿಂತನೆಯಾಗಲೀ ಗಾಂಧಿ ಅನುಯಾಯಿಗಳಿಂದ ಬರುತ್ತಿಲ್ಲ. ಅಸಂವಿಧಾನಿಕ ಮಾರ್ಗಗಳಿಗಿಂತ ಸಂವಿಧಾನಿತ ದಾರಿ ಎಷ್ಟೋ ಮೇಲು. ಆದರೆ ಗಾಂಧಿ ಹೇಳುತ್ತಿದ್ದರು, 'ದೇಶದ ಹೃದಯ ಸಂವಿಧಾನಕ್ಕಿಂತಲೂ ವಿಶಾಲವಾಗಿರಬೇಕು' ಅಂತ. ಸಾಮ್ರಾಜ್ಯಶಾಹಿ, ವಸಾಹತುಶಾಹಿ ನಿರ್ನಾಮವಾದ ರೀತಿಯಲ್ಲಿ ಆಂತರಿಕ ಹಿಂಸೆ ನಿರ್ನಾಮವಾಗುವು ದಿಲ್ಲ. ಇಂದು ಹಿಂಸೆ ವಿಸ್ತಾರಗೊಳ್ಳುತ್ತಿರುವಾಗ ಅದರ ವಿರುದ್ಧದ ಹೋರಾಟಕ್ಕೆ ಗಾಂಧಿ ಸ್ಫೂರ್ತಿಯ ನೆಲೆಯಾಗಿದ್ದಾರೆ. ಈ ಹೋರಾಟದಲ್ಲಿ ಗಾಂಧಿವಾದಿಗಳ ಪಾತ್ರ ವೇನು? ಅವರೆಲ್ಲ, ಅಣೆಕಟ್ಟು, ವಿಕೇಂದ್ರಿಕರಣ ಅಂತ ಗಡಿಬಿಡಿಯಲ್ಲಿರುವಂತಿದೆ. ಇವು ಅಮುಖ್ಯ ಎಂದು ನಾನು ಹೇಳುತ್ತಿಲ್ಲ. ಬದಲು ಸಮಗ್ರ ಹೋರಾಟದ ಸಾಮಾ ಜಿಕ ಕ್ರಿಯೆಗಳನ್ನೇಕೆ ಇವರು ಪರಿಭಾವಿಸುತ್ತಿಲ್ಲ. ನಮ್ಮ ಗಾಂಧಿವಾದಿಗಳು ಈ ನಿಟ್ಟಿನಲ್ಲಿ ಕ್ರಿಯಾಶೀಲರಾಗುತ್ತಾರೆಯೇ, ಇಲ್ಲ, ಇವಾನ್ ಇಲ್ಲಿಚ್ ಹೇಳಿದ ಮಾತನ್ನು ನಿಜಗೊಳಿಸಲು ಕೈಗೂಡಿಸುತ್ತಾರೆಯೇ?

ಗಾಂಧಿವಾದಿಗಳು ಏನು ಮಾಡುತ್ತಿದ್ದಾರೆ?

—ಸತ್ಯವ್ರತ

ಗಾಂಧೀವಾದಿಗಳನ್ನು ವಿಮರ್ಶಾತ್ಮಕವಾಗಿ ಪರೀಕ್ಷಿಸುವ, ತಮ್ಮ ಅಳತೆ ಗೋಲಿನಿಂದ ಅವರನ್ನು ಅಳೆಯುವ, ತಮ್ಮ ಒರೆಗಲ್ಲ ಮೇಲೆ ಅವರನ್ನು ಉಜ್ಜಿ ನೋಡುವ ಲೇಖನಗಳು ಆಗಾಗ್ಗೆ ಪ್ರಕಟವಾಗುತ್ತಿರುತ್ತವೆ. ಅಂಥದೊಂದು ಲೇಖನ ಕಳೆದ ತಿಂಗಳ ೩೧ ನೇ ತಾರೀಖಿನ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಬರೆದವರು ಪರಿಚಿತರು, ನಮ್ಮಲ್ಲಿ ಅನೇಕರಿಗೆ ಸಹಪಾಠಿಗಳು ಅಥವಾ ಮಿತ್ರರು ಮತ್ತು ಸಮಸ್ತ ಅಧಿಕಾರದ ಕೇಂದ್ರಸ್ಥಾನಕ್ಕೆ ನಿಕಟಸ್ಥರಾಗಿದ್ದವರು. ಅಂಥವರ ಲೇಖನವು ಪ್ರಭಾವಕಾರಿಯಲ್ಲವೆಂದೋ, ಪರಿಣಾಮಕಾರಿಯಲ್ಲವೆಂದೋ ಸುಮ್ಮನಿರುವಂತಿಲ್ಲ. ಆದುದರಿಂದ ಲೇಖನದ ಮುಖ್ಯಾಂಶಗಳನ್ನು ಉಲ್ಲೇಖಿಸಿ ಅವಕ್ಕೆ ಸಮಾಧಾನ ನೀಡಲು ಪ್ರಯತ್ನಿಸುವುದು ಕರ್ತವ್ಯ. ಲೇಖನದ ಕಡೆ ಗಮನವೇ ಹೋಗದಿರುವುದು ತಪ್ಪಾದೀತು.

ಲೇಖನದಲ್ಲಿ ವ್ಯಕ್ತವಾಗಿರುವ ಮುಖ್ಯಾಂಶಗಳು ಹೀಗಿವೆ: ಇವಾನ್ ಇಲಿಚರು ಸರ್ಕಾರದ ಆಹ್ವಾನದ ಮೇಲೆ ಭಾರತಕ್ಕೆ ಬಂದಿದ್ದಾಗ ಇಂದಿರಾ ಗಾಂಧೀ ಅವರ ಜೊತೆಗೆ ನಡೆಸಿದ ಗಂಭೀರ ಚಿಂತನದಿಂದ ಕೂಡಿದ ಸಂಭಾಷಣೆಯ ಉಲ್ಲೇಖದೊಂದಿಗೆ ಲೇಖನ ಆರಂಭವಾಗಿ ಅಲ್ಲಿ ಬಹು ಮಾರ್ಮಿಕ ಟಿಪ್ಪಣಿ ಹೊರಬೀಳುತ್ತವೆ. ತೀರ ಕಡಿಮೆ ಬೆಲೆಯ ಆರೋಗ್ಯದಾಯಕ ಔಷಧಿಯಂತೆ ಗಾಂಧೀಯವರನ್ನು ಈ ದೇಶದ ಜನ ಬಳಸುತ್ತಿರುವುದೇ ತಾವು ಭಾರತಕ್ಕೆ ಬರಲು ಒಂದು ರೀತಿಯ ಅರುಚಿಕರವೆನಿಸಿದೆ ಎಂದು ಇಲಿಚ್ ಹೇಳಿದರಂತೆ. ಸಂಕ್ಷೇಪವಾಗಿ, "ಭಾರತೀಯರು ಗಾಂಧೀಯವರ ಉಪದೇಶ ತಮ್ಮ ಮೇಲೆ ಪ್ರಭಾವ ಬೀರದಂತೆ ಪ್ರತಿರೋಧ ಶಕ್ತಿ ಬೆಳೆಸಿಕೊಂಡು ಅವುಗಳಿಂದ ದೂರ ಉಳಿದಿರುವಂತಿದೆ" ಎಂದು ಇಲಿಚ್‌ರ ಅಭಿಪ್ರಾಯ.

"ಗಾಂಧೀಯವರ ಔಷಧ ಪ್ರಭಾವಕಾರಿಯಾಗಿದ್ದಿದ್ದರೆ ದೇಶದಲ್ಲಿ ಇಷ್ಟು ಹಿಂಸೆ ಇರುತ್ತಿರಲಿಲ್ಲ. ಈಗ ಹಿಂಸಾಚಾರ ಬಹು ವ್ಯಾಪಕವಾಗಿ ಬೆಳೆದಿದೆ ಮತ್ತು ದೇಶ ಹಿಂಸಾ ವಿಧಾನಗಳನ್ನು ಸ್ವೀಕರಿಸಿದಂತೆ ಕಂಡು ಬರುತ್ತಿದೆ. ಅದೊಂದು ಜೀವನ ಪದ್ಧತಿ, ನಿತ್ಯ ಜೀವನದ ಅಂಗವೆಂಬಂತೆ ಆಗಿಹೋಗಿದೆ. ಇದನ್ನು ನೋಡಿ

ದರೆ ಗಾಂಧೀ ಭಾರತಕ್ಕೆ ಕಾಲಪಕ್ವವಾಗುವ ಮುನ್ನವೇ ಬಂದರೇ ಎನಿಸುತ್ತದೆ. ಆದರೆ ಎಲ್ಲ ಕ್ರಾಂತಿಕಾರಿಗಳು ತಮ್ಮ ಸಮಯಕ್ಕೆ ಮುಂಚೆಯೆ ಬರುತ್ತಾರಲ್ಲವೆ?' ಭಾರತೀಯರು ಗಾಂಧೀಯುವರ ಆಂದೋಳನದಲ್ಲಿ ಮಾತ್ರ ಅಲ್ಪಾವಧಿಗೆ ಅಹಿಂಸಾತ್ಮಕ ವಾಗಿ ವರ್ತಿಸಿದರು. ಅನಂತರ ಭಯಾನಕ ಸ್ವರೂಪದ ಹಿಂಸೆ ಸ್ಫೋಟಿಸಿತು, ಮಹಾತ್ಮರು ತಮ್ಮ ಮಾಂತ್ರಿಕ ಶಕ್ತಿಯನ್ನೇ ಕಳೆದುಕೊಂಡಂತೆ ಆಯಿತು. ಕೊನೆಗೆ ಅವರ ಬಲಿದಾನ ಸಹ ಹಿಂಸಾದೇವತೆಯನ್ನು ಸಂತೈಸಲಾಗಲಿಲ್ಲ ಎಂದು ಬರೆದು ಲೇಖಕರು ಗಾಂಧೀ ವಿಚಾರವಾದಿಗಳು ಏನು ಮಾಡುತ್ತಿದ್ದಾರೆ ಎಂದು ಪ್ರಶ್ನಿಸುತ್ತಾರೆ.

ಗಾಂಧೀಯುವರನ್ನೂ ಗಾಂಧೀ ವಿಚಾರವಾದಿಗಳನ್ನೂ ಹೋಲಿಸಿ ಲೇಖಕರು 'ಗಾಂಧೀ ತಮ್ಮ ತಪ್ಪು ಒಪ್ಪಿಕೊಳ್ಳುತ್ತಿದ್ದರು. ಆದರೆ ಗಾಂಧೀವಾದಿಗಳು ಗಾಂಧೀಜಿಯೂ ತಾವೂ ಬಹುಮಟ್ಟಿಗೆ ಸರಿ ಎಂದು ಭಾವಿಸುತ್ತಾರೆ. ಗಾಂಧೀ ಯುವರದು ತೆರೆದ ಮನಸ್ಸು, ಪೂರ್ವಗ್ರಹರಹಿತ ಚಿತ್ತ; ಗಾಂಧೀ ವಿಚಾರವಾದಿಗಳ ಮನಸ್ಸಿನ ಕಿಟಕಿ ಬಾಗಿಲುಗಳು ಮುಚ್ಚಿರುತ್ತವೆ. ಗಾಂಧೀಜಿ ವಿನೋದಿ; ಗಾಂಧೀ ವಾದಿಯದು ಶ್ರೀಮದ್ ಗಾಂಭೀರ್ಯದ ಮುಖ ಮುದ್ರೆ.

'ಗಾಂಧೀ ಮೊದಲ ಕದನದಲ್ಲಿ ಸೋತರು, ಜಿನ್ನಾ ಗೆದ್ದರು. ಪಾಕಿಸ್ತಾನ ಹುಟ್ಟಿತು. ಈಗ ಎರಡನೇ ಕದನವನ್ನೂ ಕಳೆದುಕೊಂಡು ಗಾಂಧೀ ಹಿಮ್ಮೆಟ್ಟಿ ದಂತೆ ಕಾಣುತ್ತದೆ. ಆದರೆ ನಲವತ್ತು ವರ್ಷಗಳ ನಂತರ ಅಂಬೇಡ್ಕರರ ಎದುರು ಪುನಃ ಸೋಲು ಅನುಭವಿಸಿದಂತೆ ಕಾಣುತ್ತದೆ. ಜಾತೀಯ ಹಿಂಸೆಯನ್ನು ಕೊನೆ ಗಾಣಿಸುವುದಕ್ಕೆ ಏನು ಮಾಡಬಹುದೆಂದು ಗಾಂಧೀವಾದಿಗಳು ಯೋಚಿಸಿರುವಂತೆ, ಪರಿಹಾರ ಸೂಚಿಸಿದಂತೆ ಕಂಡು ಬಂದಿಲ್ಲ. ಹಿಂಸಾಜಯ ಮಾನವಜಾತಿಯ, ನಮ್ಮ ಕಾಲದ ಮತ್ತು ಮುಂಬರುವ ದಶಕದ ಅತ್ಯಂತ ಪ್ರಮುಖ ಸವಾಲು. ಅದೇನೂ ತಾನಾಗಿಯೇ ಅಳಿಯಲಿಲ್ಲ. ಲಕ್ಷಾಂತರ ಜನ ಪ್ರಯತ್ನಪೂರ್ವಕ ಅದನ್ನು ಹೊರದಬ್ಬಬೇಕಾಯಿತು.'

'ಹಿಂಸೆಯ ವಿರುದ್ಧ ಜಗತ್ತಿನಾದ್ಯಂತ ನಡೆಯುವ ವ್ಯಾಪಕ ಸಂಗ್ರಾಮಕ್ಕೆ ಗಾಂಧೀಪ್ರೇರಕ ಶಕ್ತಿ. ಇದರಲ್ಲಿ ಭಾರತೀಯರ ಪಾತ್ರವೇನು? ಗಾಂಧೀವಾದಿಗಳು ಮುಚ್ಚ ಮನಸ್ಸಿನವರಾಗಿ ವಿಕೇಂದ್ರೀಕರಣ, ಭಾರಿ ನೀರಾವರಿ ಯೋಜನೆಗಳ ವಿರೋಧ ಇತ್ಯಾದಿಯಲ್ಲಿ ತೊಡಗಿದ್ದಾರೆ. ಅವು ಮುಖ್ಯವಲ್ಲವೆಂದಲ್ಲ. ಅವರು ಸಮಾಜ ವಿಜ್ಞಾನಿಗಳೋ, ಗೋಷ್ಠಿ-ಸಂಗೋಷ್ಠಿಗಳಲ್ಲಿ ಆಕರ್ಷಕ ಭಾಷಣಕಾರರೋ ಇನ್ನೇನೋ ಆದರೆ ಹೇಗೆ? ಸಮಸ್ಯೆಗೆ ಅದು ಪರಿಹಾರವೇ? ಅವರು ಕ್ರಿಯಾಶೀಲ, ಕ್ರಿಯಾಪ್ರಧಾನ ವ್ಯಕ್ತಿಗಳಾಗಬೇಡವೇ ಎಂದು ಕೇಳಿದಾರೆ. 'ಉರಿಯುತ್ತಿರುವ ಹಿಂಸಾಜ್ವಾಲೆಯನ್ನು ನಂದಿಸಲು ಗಾಂಧೀ ಮಾರ್ಗ ಮಾತ್ರ ಪರಿಣಾಮಕಾರಿ" ಎಂದಿದಾರೆ.

ಲೇಖಕರ ವಿಶ್ಲೇಷಣೆ ಮತ್ತು ಅವರ ನಂಬಿಕೆ ಸರಿ. ಅವನ್ನು ಓದಿ ಯಾರಿಗೇ ಆಗಲಿ ಸಂತೋಷವಾಗದಿರದು. ಅವರ ನಂಬಿಕೆ ಕುರಿತು ಹೇಳುವುದೇನಿದೆ? ಅವು ನಮಗೂ ಅವರಿಗೂ ಸಾಮಾನ್ಯಾಂಶ ಹಂಚಿಕೊಂಡ ಒಮ್ಮತದ ನಂಬಿಕೆಗಳು. ಆದರೆ ಲೇಖಕರು ಗಾಂಧೀಯವರನ್ನು ಅವರ ಅನುಯಾಯಿಗಳಿಗೆ ಹೋಲಿಸಿದ್ದು ತಪ್ಪು. ಹೋಲಿಸಬಾರದ ಕಡೆ, ಅದಕ್ಕೆ ಆಧಾರವಿಲ್ಲದ ಕಡೆ ಹೋಲಿಸಲು ಪ್ರಯತ್ನಿಸಿದ್ದಾರೆ. ತೀರ ಭಿನ್ನ ದರ್ಜೆ, ವಿಭಿನ್ನಮಟ್ಟದ ವ್ಯಕ್ತಿತ್ವಗಳ ಮಧ್ಯೆ ಹೋಲಿಕೆಯೆಂಥದು?

ದೇಶದ ಜ್ವಲಂತ ಸಮಸ್ಯೆಗಳನ್ನು ಚಿಂತಿಸುವ ಸಂದರ್ಭದಲ್ಲಿ ಗಾಂಧೀಮಾರ್ಗ ಎಷ್ಟು ಪ್ರಕೃತ, ಅದರ ಅನ್ವಯ ಹೇಗೆ ಎಂದೆಲ್ಲ ಯೋಚಿಸುವಾಗ ನಮ್ಮ ಮುಂದೆ ಬಂದು ನಿಲ್ಲುವುದು ಲೇಖಕರು ಸಾರಾಂಶ ರೂಪವಾಗಿ ಲೇಖನದ ಆರಂಭದಲ್ಲೇ ಹೇಳಿರುವ ಮಾತುಗಳು : ಭಾರತೀಯರು ಗಾಂಧೀಯವರ ಉಪದೇಶ ತಮ್ಮ ಮೇಲೆ ಪ್ರಭಾವ ಬೀರದಂತೆ ಪ್ರತಿರೋಧ ಶಕ್ತಿ ಬೆಳೆಸಿಕೊಂಡು ಅವುಗಳಿಂದ ದೂರ ಉಳಿದಂತಿದೆ; ಇದು ಯಥಾರ್ಥ ಚಿತ್ರ, ಇದೇ ಇಂದಿನ ಸತ್ಯ ಸಂಗತಿ ಮತ್ತು ಇದೇ ಒಟ್ಟು ಸ್ಥಿತಿಯ ಸಾರವೆನ್ನಬಹುದು. ಅದೇ ರೀತಿ ಗಾಂಧೀ ಜನ ಮುಚ್ಚಿದ ಮನಸ್ಸಿನವರು ಎನ್ನುವುದಕ್ಕಿಂತ ದೇಶ ಗಾಂಧೀವಾದಿಗಳ ಬಗ್ಗೆ ಸಹ ಮುಚ್ಚು ಮನಸ್ಸಿನ ನೀತಿಯನ್ನನುಸರಿಸಿದೆ ಎನ್ನುವುದು ಸತ್ಯಕ್ಕೆ ಹೆಚ್ಚು ಸಮೀಪದ ಚಿತ್ರವಾದೀತು. ಅವರ ಯಾವ ಅಭಿಪ್ರಾಯವೂ, ಯಾವ ಮಾತೂ ತನ್ನ ಮನಸ್ಸಿನೊಳಗೆ ಪ್ರವೇಶಿಸದಂತೆ, ಅಲ್ಲಿ ಅದಕ್ಕೆ ಜಾಗವೇ ಇರದಂತೆ ದೇಶ ನೋಡಿಕೊಳ್ಳುತ್ತದೆ. ಅವರು ರಾಜಕೀಯ ಶಕ್ತಿಕೇಂದ್ರವಲ್ಲ, ಅವರ ಹಿಂದೆ ಜನ ಜಂಗುಳಿಯಿಲ್ಲ, ಇನ್ನು ಅವರ ಮಾತಿಗೇಕೆ ಬೆಲೆ ಎಂದೆಲ್ಲ ಯೋಚಿಸಿ ಅವರನ್ನು ಅ-ಪ್ರಭಾವಕಾರಿಯನ್ನಾಗಿಯೇ ಉಳಿಸಲು ದೇಶವೇ ನಿಶ್ಚಯಿಸಿದಂತಿದೆ. ಇಲ್ಲವೇ ಗಾಂಧೀ ಜನ ಮಾಡಿರುವ ಮಾಡುತ್ತಿರುವ ಪ್ರಯತ್ನಕ್ಕೆ ಅಲ್ಪ ಯಶಸ್ಸಾದರೂ ದೊರೆಯಬೇಕಾಗಿತ್ತು. ಅವರ ಪ್ರಯತ್ನ ಅಲ್ಪ, ಮಾಡಬೇಕಾದುದು ಇನ್ನೂ ಅಗಾಧವಾಗಿದೆ ಎನ್ನುವುದು ನಿಜ. ಅವರ ಅಲ್ಪ ಪ್ರಯತ್ನದ ಉದಾಹರಣೆ ಎಷ್ಟೋ ಇವೆ. ಅಸ್ಸಾಂ ಉದಾಹರಣೆಯನ್ನೇ ನೋಡಿದರೆ, ಅಲ್ಲಿಯ ಸಮಸ್ಯೆಯ ಪರಿಹಾರಕ್ಕೆ ಗಾಂಧಿ ಶಾಂತಿ ಪ್ರತಿಷ್ಠಾನ ಸೂಚಿಸಿದ ಅಂಶಗಳ ಸೂತ್ರ, ಆರ್. ಕೆ. ಪಾಟೀಲರ ಸೂತ್ರಗಳ ಗತಿ ಏನಾಯಿತು? ಆಗಿನ ಸರ್ಕಾರ ಸೂತ್ರದ ಸಂಬಂಧ ಹೇಗೆ ನಡೆದುಕೊಂಡಿತು? ಇತ್ತೀಚಿನ ಉದಾಹರಣೆ ಪಂಜಾಬ್ ಸಮಸ್ಯೆ. ಗಾಂಧೀವಾದಿಗಳು ಕನಿಷ್ಠ ಆರು ಬಾರಿ ಬೇರೆ ಬೇರೆ ಸಮಯದಲ್ಲಿ ಶಾಂತಿ ಪ್ರಯತ್ನಕ್ಕೆ ಕೈಹಾಕಿದ್ದಾರೆ. ಶ್ರೀಮತಿ ವಿಮಲಾ ಠಕಾರರ ಸೂತ್ರ, ಸಲಹೆಗಳ ಕಂತೆ ಸಹ ಇದೆ. ಅವರು ರಾಷ್ಟ್ರೀಯ ಭಾವೈಕ್ಯತಾ ಪರಿಷತ್ತಿನ ಗೌರವಾನ್ವಿತ ಸದಸ್ಯೆ. ದೀರ್ಘ ನಿರೀಕ್ಷೆ, ಪಂಜಾಬ್‌ನ ಧಾರ್ಮಿಕ ಲೌಕಿಕ ನಾಯಕರೊಡನೆ ಸುದೀರ್ಘ ಚರ್ಚೆಯ ನಂತರ ಕೊಟ್ಟ ಸಲಹೆಗಳ ಕಂತೆ ದೇಶದ ಮುಂದಿದೆ, ಸರ್ಕಾರದ ವಿಚಾರಾರ್ಥವಿದೆ. ಆದರೆ ಅದಕ್ಕೇನು ಬೆಲೆ ಸಿಕ್ಕಿದೆ? ಹೀಗೇಕೆ?

ಒಮ್ಮೊಮ್ಮೆ ಯೋಚನೆಯಾಗುತ್ತದೆ. ಗಾಂಧೀವಾದಿ ಒಂದು ಕಡೆ, ರಾಜನೀತಿಜ್ಞರು ಇನ್ನೊಂದು ಕಡೆ. ಇವರ ನಡುವೆ ಕಾರ್ಯ ವಿಭಜನೆಯಾಗಿ ಅದಕ್ಕೆ ತಕ್ಕಂತೆ ಗಾಂಧೀವಾದಿಗಳು ತಮ್ಮ ಪಾಲಿನ ಕರ್ತವ್ಯ ನೆರವೇರಿಸಿ ಎಂದು ದೇಶ ಬಯಸುತ್ತದೋ? ಜನ ನಿರೀಕ್ಷಿಸುತ್ತಾರೋ? ರಾಜನೀತಿಜ್ಞರು ಹಿಂಸೆಯನ್ನು ಉತ್ತೇಜಿಸುವವರು, ಅದನ್ನು ಪರಿಪೋಷಿಸುವವರು, ಬೆಳೆಸುವವರು, ಎಣ್ಣೆ ಹುಯ್ದು ಕಡ್ಡಿ ಗೀಚುವವರು; ಗಾಂಧೀವಾದಿಗಳು ಜ್ವಾಲಾಗ್ನಿಯನ್ನು ನಂದಿಸುವವರು. ರಾಜನೀತಿಜ್ಞರು ಭ್ರಷ್ಟಾಚಾರ, ಅನಾಚಾರ, ಅತ್ಯಾಚಾರ ಮಾರ್ಗಕ್ಕೆ ದೇಶವನ್ನೆಳೆಯುವವರು; ಗಾಂಧೀವಾದಿ ಅದನ್ನು ಗುಡಿಸಿ ಹಾಕುವವರು, ಹಾಕಲಿ. ರಾಜನೀತಿಜ್ಞರು ಕ್ಲಿಷ್ಟತೆ ಇಲ್ಲದೆಡೆ, ಬಿಕ್ಕಟ್ಟು ಇಲ್ಲದೆಡೆ, ಸಮಸ್ಯೆಯಿರದ ಕಡೆ ಅವನ್ನು ತಂದು ಹಾಕುವವರು; ಗಾಂಧೀವಾದಿ ಅವನ್ನು ಬಿಡಿಸುವವರು, ಬಿಡಿಸಲಿ. ಹೀಗೆಂದು ಕಾರ್ಯ ವಿಭಜನೆಯಾಗಿದೆಯೆ? ಲೇಖಕರ ಮನಸ್ಸಿನ ಮೂಲೆಯಲ್ಲೆಲ್ಲೋ ಇಂಥ ಕಾರ್ಯ ವಿಭಜನೆಯ ತರ್ಕ ಸುಳಿದಾಡುತ್ತಿರುವಂತೆ ಕಂಡು ಬರುತ್ತಿದೆ. ಆದರೆ ದೇಶದಲ್ಲೆಲ್ಲೆಲ್ಲೂ ಶ್ರದ್ಧೆಯಾದವರು ಪಾಷಾಣರು ಹರಡಿದ್ದಾರೆ; ವಾಮಪಂಥಿ, ಬಲಪಂಥೀಯರ ಸಿದ್ಧಾಂತ, ಕಾರ್ಯಪ್ರತಾಪ ಪ್ರಬಲವಾಗಿದೆ. ಹಿಂಸಾದೇವಿಯ ಆರಾಧಕರಿವರು. ಹಿಂಸಾ ವಿಧಾನಕ್ಕೆ ಗೌರವಾದರ ಹುಟ್ಟುವಂತೆ ಮಾಡುವುದು, ಅದೇ ಹೆಚ್ಚು ಪರಿಣಾಮಕಾರಿ, ನೇರ ಮತ್ತು ಅತಿ ಕಡಿಮೆ ವೇಳೆಯಲ್ಲಿ ಫಲಿಸುವ ವಿಧಾನ. ಇದುವೇ ಅವರ ತತ್ವ. ಅದಕ್ಕನುಸಾರ ಜನರ ಹೃನ್ಮಗಳಲ್ಲಿ ಗಾಂಧೀ, ಟಾಗೋರ್ ವಿರಾಜಿಸುತ್ತಿರುವುದನ್ನು ತಳ್ಳಿಹಾಕಿ ಆ ಸ್ಥಾನದಲ್ಲಿ ಹಿಂಸಾ ದೇವತೆ ರಾರಾಜಿಸುವಂತೆ, ಗರ್ಜಿಸುವಂತೆ ಮಾಡುವುದು ಇವರ ಸಾಂಸ್ಕೃತಿಕ ಕ್ರಾಂತಿಯ ಗುರಿ. ಈ ದಿಶೆಯಲ್ಲಿ ಮೇಲೆ ಹೇಳಿದ ಎಲ್ಲ ವೈಚಾರಿಕ ಮತ್ತು ರಾಜಕೀಯ ಗುಂಪುಗಳು ಏಕನಿಷ್ಠೆಯಿಂದ ಕಾರ್ಯತತ್ಪರವಾಗಿವೆ. ಉತ್ತರ ಪ್ರದೇಶ, ಬಿಹಾರ, ತಮಿಳುನಾಡು, ಗುಜರಾತಿನ ಉದಾಹರಣೆ ಮುಂದಿವೆ. ಪಂಜಾಬ್ ಸಮಸ್ಯೆಯ ಸ್ವರೂಪವಾದರೂ ಏನು? ಚುನಾವಣೆಗಳಲ್ಲಿ ನಡೆಯುವ ಹಿಂಸಾಚಾರ. ಪ್ರತಿಯೊಂದು ಪಕ್ಷವೂ ಗುಂಡಾಪಡೆಗಳನ್ನು ಸಾಕುತ್ತಿರುವುದು ಮತ್ತು ಅವನ್ನು ಚುನಾವಣೆಯಲ್ಲಿ ಬಳಸುತ್ತಿರುವುದು; ಅಧಿಕಾರಾರೂಢ ಪಕ್ಷ ಮಾಡುವ ಒಳ್ಳೆಯ ಕಾರ್ಯವನ್ನು ಕೂಡ ವಿರೋಧಿಸಿ ಅದಕ್ಕೆ ರಾಜಕೀಯ ಶ್ರೇಯ ಸಿಕ್ಕದಂತೆ ನೋಡಿಕೊಳ್ಳುವ ವಿರೋಧಿ ಕಾರ್ಯತಂತ್ರ, ಇವೇ ಮುಂತಾದ ಅಗಣಿತ ಉದಾಹರಣೆಗಳಲ್ಲಿ ನೇರವಾಗಿ ರಾಜನೀತಿಜ್ಞರು ಹಿಂಸಾತ್ಮಕ ವಿಧಾನಗಳಿಗೆ ದೇಶವನ್ನೆಳೆದಿದ್ದಾರೆ. ಇಷ್ಟಾದರೂ ದೇಶ ಅವರ ಕಡೆಯೇ ಒಲಿದಿರುವಾಗ, ಅವರನ್ನೇ ಅಧಿಕಾರ ಪೀಠಕ್ಕೆ ಆರಿಸಿ ತರುತ್ತಿರುವಾಗ, ಅವರನ್ನೇ ಹಾಡಿ ಹೊಗಳುತ್ತಿರುವಾಗ, ಅವರೇ ಮನ್ನಣೆ ಪಡೆದ ನಾಯಕರಾಗಿರುವಾಗ, ಅವರ ಕಾರ್ಯ ವಿಧಾನ ಮೆಚ್ಚುಗೆಗೆ ಪಾತ್ರವಾಗಿರುವಾಗ ಗಾಂಧೀವಾದಿಗಳು ಮಾಡುವುದೇನಿದೆ? ಅವರ ಶಕ್ತಿ, ತಪಸ್ಸು ಗಾಂಧೀಜಿಯಷ್ಟಿಲ್ಲ. ಇದು ಸರ್ವ ವಿದಿತ. ಆದುದರಿಂದ ಫಲಿತಾಂಶವೂ ಅದಕ್ಕೆ ತಕ್ಕಷ್ಟು.

ಈ ಜನ ಇನ್ನಷ್ಟು ತಪ್ಪಿಸಬೇಕಾಗಿತ್ತು. ಮತ್ತಷ್ಟು ಪ್ರಯತ್ನಶೀಲರಾಗಬೇಕಾಗಿತ್ತು. ಇನ್ನಾದರೂ ಕಾಲ ಮಿಂಚಿಲ್ಲ. ಗಾಂಧೀವಾದಿ ಎಚ್ಚೆತ್ತು. ದ್ವಿಗುಣ ಉತ್ಸಾಹದಿಂದ ಈ ಸವಾಲನ್ನೆದುರಿಸಲಿ ಎಂದು ನಿರೀಕ್ಷಿಸುವುದು ತಪ್ಪಲ್ಲ. ಗಾಂಧೀ ಸವಾಲು ಕಾರ್ಯಕ್ರಮ ಇಂಥ ನಿರೀಕ್ಷೆಯ ಪೂರೈಕೆಗಾಗಿಯೇ ಆದರೆ ವಸ್ತು ಸ್ಥಿತಿಯ ವಿಶ್ಲೇಷಣೆ ಮಾತ್ರ ಅವಶ್ಯಕವೆಂದು ಇಷ್ಟು ಬರೆಯಬೇಕಾಯಿತು,

ರಾಜನೀತಿಜ್ಞರ ಪಾತ್ರ ಒಂದೆಡೆ ಹೀಗಿದ್ದರೆ ಇನ್ನೊಂದೆಡೆ ಸರ್ಕಾರದ ಹೊಣೆಗಾರಿಕೆಯೇನು ಕಡಿಮೆ? ಜನ ಹಿಂಸಾಚಾರಕ್ಕಿಳಿಯದ ಹೊರತು, ಸಾರ್ವಜನಿಕ ಆಸ್ತಿಪಾಸ್ತಿಗೆ ಹಾನಿಯುಂಟು ಮಾಡದ ಹೊರತು, ಬೆಂಕಿ, ಲೂಟಿ, ಕೊಲೆ ರಕ್ತಪಾತವಾಗದ ಹೊರತು. ಆತ್ಮದಾಹ ಮಾಡಿಕೊಳ್ಳದ ಹೊರತು ಸರ್ಕಾರ ಕಣ್ತೆರೆಯದು. ಉದ್ದೇಶ್ಯಪೂರ್ವಕ, ಅಥವಾ ಸ್ವಾರ್ಥ ಪ್ರೇರಿತವಾಗಿ, ಸಂಕುಚಿತ ರಾಜಕೀಯ ಸ್ವಾರ್ಥ ಸಾಧನೆಗಾಗಿ ನೀತಿ ನಿರ್ಧಾರಕ ಕಿಚ್ಚು ಇಲ್ಲದಲ್ಲಿ ಕಿಚ್ಚು ಇಟ್ಟಿದ್ದಾರೆ. ಈ ಎರಡೂ ಸ್ಥಿತಿಯ ನಡುವೆ, ಗಾಂಧೀವಾದಿಗಳು ಶಾಂತಿಯುತ, ಶಿಸ್ತು. ಸಂಯಮದಿಂದೊಡಗೂಡಿದ ಸತ್ಯಾಗ್ರಹದ ಮೇಲ್ಪಂಕ್ತಿ ಹಾಕಿ ತೋರಿಸಿದಾಗ್ಯೂ ಅದಕ್ಕೆ ಮಾನ್ಯತೆಯೂ ಇಲ್ಲ, ಬೆಲೆಯೂ ಇಲ್ಲದಂತಾಗಿದೆ. ಇನ್ನು ಅದರ ಅನುಸರಣೆಯ ಮಾತು ದೂರವೇ ಉಳಿಯಿತು. ಇವನ್ನೆಲ್ಲ ಪರಿಶೀಲಿಸಿದರೆ ಗಾಂಧೀವಾದಿಗಳು ಮುಚ್ಚಿದ ಮನಸ್ಸಿನವರಾಗಿ ತೋರಿಬರುವುದಿಲ್ಲ. ರಾಜನೀತಿಜ್ಞರು, ಸರ್ಕಾರಗಳು, ಆಡಳಿತಗಾರರು ಅವರ ಬಗ್ಗೆ ಮುಚ್ಚು ಮನಸ್ಸಿನವರಾಗಿದ್ದಾರೆ ಎನ್ನುವುದೇ ಹೆಚ್ಚು ವಾಸ್ತವಿಕ ಸಂಗತಿ. ಸದಾ ಕಿಚ್ಚು ಹೊತ್ತಿಸುವವರು, ಅದರಲ್ಲೇ ತಲ್ಲೀನರಾಗಿರಲಿ, ಅದನ್ನು ಅಡಗಿಸುವ ಕಾರ್ಯ ಗಾಂಧೀವಾದಿಯಿಂದಾಗಲಿ ಎನ್ನುವುದು ಹಿಂಸಾಮಾರ್ಗದ ತ್ಯಾಜ್ಯಕ್ಕೆ ಪರಿಹಾರವಲ್ಲ. ಶಾಶ್ವತ ಸ್ಥಿರ ಪರಿಹಾರವೆಲ್ಲಿದೆ ಎಂಬುದು ತೀರ ಸ್ಪಷ್ಟ. ರಾಜಕೀಯ ಪಕ್ಷ-ಪಂಗಡಗಳು, ಧಾರ್ಮಿಕ, ಸಾಂಪ್ರದಾಯಿಕ ಶಕ್ತಿಗಳು ತಮ್ಮ ಸಂಕೀರ್ಣ ಸ್ವಾರ್ಥ ಸಾಧನೆಗಾಗಿ ಹಿಂಸಾ ವಿಧಾನಗಳನ್ನು ತ್ಯಜಿಸುವುದೇ ನೇರ, ಏಕೈಕ ಸ್ಥಿರ ಮತ್ತು ಶಾಶ್ವತ ಸಮಾಧಾನ. ಇದೇ ಹಾದಿಯನ್ನು ತುಳಿದು ಪ್ರಜಾತಂತ್ರ, ದೇಶದ ಸಮಗ್ರತೆ, ಏಕತೆ ಅಷ್ಟೇಕೆ ಸ್ವಾತಂತ್ರ್ಯ ಸಹ ಕಾಪಾಡಿಕೊಳ್ಳುವುದು ಸಾಧ್ಯ. ಅನ್ಯಥಾ ಇವೆಲ್ಲ ಪುಲಿಕತ ಮಾತುಗಳಿಂದ ಕೈತೊಳೆದುಕೊಂಡಂತೆಯೇ. ಗಾಂಧೀವಾದಿಗಳು ಈ ಮಾತನ್ನು ಪ್ರತಿ ಉಸಿರಿನಲ್ಲೂ ಸಾರಿ ಸಾರಿ ಹೇಳುತ್ತಿದಾರೆ. ಸಮಸ್ಯೆಗೆ ಅವರ ಉತ್ತರ 'ಮೂಲೇ ಕುಠಾರಃ' ನೀತಿಯ ಅನುಸರಣೆಯೇ.

ಲೇಖಕ ಶಾರದಾಪ್ರಸಾದರು ತೀರ ಮುಗ್ಧರಂತೆ, ವಿಷಯವನ್ನು ತೀರ ಸರಳಗೊಳಿಸಿ ಅಥವಾ ಏನೂ ಅರಿಯದವರಂತೆ ಹಿಂಸೆಯನ್ನು ಕುರಿತು ಬರೆದಿರವುದು ಆಶ್ಚರ್ಯ. ದೇಶದಲ್ಲಿ ಬೆಳೆದು ಹೆಮ್ಮರವಾಗಿ ನಿಂತಿರುವ ಹಿಂಸಾ ವೃತ್ತಿಗೆ ಕಾರಣವೆಲ್ಲಿದೆ ಎಂದು ಅವರಿಗೆ ಗೊತ್ತು. ಇಂದಿರಾಜಿಯವರ ಆಪ್ತ ವರ್ಗದಲ್ಲಿದ್ದ

ಅವರಿಗೆ ಇದೆಲ್ಲ ಚೆನ್ನಾಗಿ ಗೊತ್ತು. ತಿಳಿಯದಪರಂತೆ ಗಾಂಧೀ ಜನದ ಕಡೆ ಹೊರಳಿ ಪ್ರಯೋಜನವೇನು?

ಆದರೆ ಲೇಖಕರ ಸದಾಶಯದ ಮಾತನ್ನು ಗ್ರಹಿಸದೇ ಹೋಗದಿರುವುದು ಅವಿನಯವಾದೀತು. ಗಾಂಧೀವಾದಿಗಳು ಅವರು ಹೇಳಿದ ಸವಾಲನ್ನು ಎದುರಿಸಲು ಸಜ್ಜಾಗುತ್ತಿದ್ದಾರೆ.

ಸರ್ವೋದಯ ವಾಹಿನಿಯ ಸಾಭಾರ

ಕಂಬನಿ

ಕರ್ನಾಟಕ ಚಲನಚಿತ್ರ ಹಾಗೂ ರಂಗಭೂಮಿಯ ಅದಮ್ಯ ಉತ್ಸಾಹಿ ಮತ್ತು ಪ್ರಯೋಗಶೀಲ ಕಲಾಕಾರ **ಶ್ರೀ ಶಂಕರ್‌ನಾಗರ** ಅಕಾಲಿಕ ಹಾಗೂ ದುರ್ಘಟನಾತ್ಮಕ ಮರಣಕ್ಕಾಗಿ "ಜನಪದ ವಿಚಾರ" ತನ್ನ ಅತೀವ ಸಂತಾಪವನ್ನೂ ಮತ್ತು ಮೃತರ ಆತ್ಮಕ್ಕೆ ಶಾಂತಿಯನ್ನೂ ಕೋರುತ್ತದೆ.

* * *

ಮೈಸೂರಿನ ರಚನಾತ್ಮಕ ಕಾರ್ಯಕರ್ತರಾಗಿದ್ದ **ಶ್ರೀ ಹೆಚ್. ವಿ. ಸುಬ್ಬ ರಾಮಯ್ಯನವರು** ಕಳೆದ ತಿಂಗಳು ನಿಧನರಾದರು. ''ಜನಪದ ವಿಚಾರ" ದುಃಖ ವ್ಯಕ್ತ ಪಡಿಸುತ್ತಾ ಅವರ ಆತ್ಮಕ್ಕೆ ಶಾಂತಿ ಬಯಸುತ್ತದೆ.

* *

ಶ್ರೀ ಆರ್. ಎಸ್. ಆರಾಧ್ಯ, ತುಮಕೂರು ಅವರು ಸ್ವಾತಂತ್ರ್ಯಯೋಧರು, ರಚನಾತ್ಮಕ ಕಾರ್ಯಕರ್ತರು. ಅವರು ಅಕ್ಟೋಬರ್ ಮೂರರಂದು ನಿಧನರಾದರು. ಅವರ ಮರಣಕ್ಕಾಗಿ ಜನಪದ ವಿಚಾರ ದುಃಖ ವ್ಯಕ್ತ ಪಡಿಸುತ್ತದೆ ಮತ್ತು ಶಾಂತಿಯನ್ನು ಕೋರುತ್ತದೆ.

ಜನಪದ ವಿಚಾರ

- ನಿಮಗಿಷ್ಟವಾದರೆ ನಿಮ್ಮ ಮಿತ್ರರಿಗೂ ಚಂದಾದಾರರಾಗಲು ತಿಳಿಸಿ
- ವಾರ್ಷಿಕ ಚಂದಾ ಜುಲೈ ೧೯೯೦ ರಿಂದ ೨೫ ರೂ.
- ಪತ್ರಿಕೆ ತಲುಪದಿದ್ದರೆ, ನಿಮ್ಮ ವಿಳಾಸ ಬದಲಾದರೆ ನಮಗೆ ತಿಳಿಸಿ,
- ಲೇಖನಗಳನ್ನು ಕಳುಹಿಸಿ.

ಸಾಮಾಜಿಕ, ಆರ್ಥಿಕ ವಿಶ್ಲೇಷಣೆಗಳ ಅಧ್ಯಯನ ವರದಿಗಳಿಗೂ ಸ್ವಾಗತ.

ನಮ್ಮ ವಿಳಾಸ :– **ಜನಪದ ವಿಚಾರ**

ಜನಪದ ಸೇವಾ ಟ್ರಸ್ಟ್,

ಮೇಲುಕೋಟೆ–571431

ಕರ್ನಾಟಕ.

ಜನಪದ ಸೇವಾ ಟ್ರಸ್ಟ್ ಪ್ರಕಟಣೆಗಳು

ಒಂದು ಹುಲ್ಲಿನ ಕ್ರಾಂತಿ

ಪ್ರಾಕೃತಿಕ ವ್ಯವಸಾಯ–ಒಂದು ಪರಿಚಯ

ಮೂಲ : ಮಸನೋಬು ಫುಕುವೊಕಾ ಕನ್ನಡಾನುವಾದ : ಸಂತೋಷ್ ಕೌಲಗಿ ಬೆಲೆ : 15 ರೂ.

ಮನುಕುಲ ವಿನಾಶ: ಬಾಂಬ್ ಬೇಕಿಲ್ಲ ಅಣುಸ್ಥಾವರ ಸಾಕು

ಡಾ॥ ಎ. ಎನ್. ನಾಗರಾಜ್

ಬೆಲೆ : 2–00 ರೂ.

ಮಾರಾಟಕ್ಕೆ

ಕಾವ್ಯಸುಧಾ ಎಂ. ಎಸ್. ನರಸಿಂಹಮೂರ್ತಿ

ಬೆಲೆ : 12–00 ರೂ.

ಕಾಂಪೋಸ್ಟ್ ಗೊಬ್ಬರದ ಚಮತ್ಕಾರ

ಬೆಲೆ: 5–00 ರೂ.

KRNM 44

ಜನಪದ ಸೇವಾ ಟ್ರಸ್ಟ್ ಪರವಾಗಿ ಸುರೇಂದ್ರ ಕೌಲಗಿ ಅವರಿಂದ ಮೇಲುಕೋಟೆಯ
ಜನಪದ ಸೇವಾ ಟ್ರಸ್ಟ್ ಮುದ್ರಣಾಲಯದಲ್ಲಿ, ಮುದ್ರಿತವಾಗಿ ಪ್ರಕಟಿಸಲ್ಪಟ್ಟಿತು.
ಸಂಪಾದಕರು : ಎಸ್. ಪಟ್ಟಾಭಿರಾಮನ್ ಸಹಾಯಕ ಸಂಪಾದಕರು : ಸುರೇಂದ್ರ ಕೌಲಗಿ